ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 4
Pages - 20
₹ - 12
April - 2015



ಮುಂಗಾರಿನ ಅಭಿಷೇಕಕೆ
ಮಿದುವಾಯಿತು ನೆಲವು.
ಧಗೆಯಾರಿದ ಹೃದಯದಲ್ಲಿ
ಪುಟಿದೆದ್ದಿತು ಚೆಲುವು

– ಜಿ.ಎಸ್. ಶಿವರುದ್ರಪ್ಪ

ಶ್ರೀ ಮಹಾವೀರ ಜಯಂತಿ

ಗುಡ್ ಫ್ರೈಡೇ

ಡಾ. ಅಂಬೇಡ್ಕರ್ ಜಯಂತಿ

ಶ್ರೀ ಬಸವ ಜಯಂತಿ

ಶ್ರೀ ಶಂಕರ ಜಯಂತಿ

ಶ್ರೀ ರಾಮಾನುಜಾ ಜಯಂತಿ

## ಪುಣ್ಯ ಪುರುಷರ ಜಯಂತಿಗೆ ಶುಭಾಶಯಗಳು

# ನೂತನ ಆರ್ಥಿಕ ವರ್ಷ - ಪ್ರಾರಂಭಿಕ ಮಹತ್ವದ ಹೆಜ್ಜೆಗಳು



ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬಂಧುಗಳಿಗೆ ನೂತನ ಆರ್ಥಿಕ ವರ್ಷದ ಶುಭಾಶಯಗಳು.

ಈ ದೇಶದ ಭವ್ಯ ಪರಂಪರೆ, ಸನಾತನ ಧರ್ಮ, ಸಂಸ್ಕೃತಿ, ಉತ್ತಮ ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕ್ಕಾಗಿ ಶ್ರಮಿಸಿದ ಶ್ರೀ ಶಂಕರಾಚಾರ್ಯರ, ಶ್ರೀ ರಾಮಾನುಜಾಚಾರ್ಯ, ಶ್ರೀ ಬಸವಣ್ಣ, ಶ್ರೀ ಮಹಾವೀರ ಹಾಗೂ ಶ್ರೀ ಅಂಬೇಡ್ಕರರವರ ಜಯಂತ್ಯೋತ್ಸವಗಳ ಪುಣ್ಯದಿನಗಳನ್ನು ಆಚರಿಸುವ ಎಲ್ಲರಿಗೂ ಹೊಸ ಚೈತನ್ಯ, ಉತ್ಸಾಹ ಬರಲಿ. ಕಾಯಕದಲ್ಲಿ ಶ್ರದ್ಧಾ ಭಕ್ತಿಗಳು ಹೆಚ್ಚಾಗಲಿ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾರ್ಗದರ್ಶನವಾಗುವಂತಾಗಲಿ ಎಂದು ಹಾರೈಸುತ್ತೇನೆ.

2014-15ನೇ ಸಾಲಿನ ಲೆಕ್ಕಪತ್ರಗಳು ಮುಕ್ತಾಯವಾಗಿವೆ. ಬ್ಯಾಂಕ್ ಖಾತೆಗಳನ್ನು ಅಂತಿಮಗೊಳಿಸಿ, ತಾಳೆ ಮಾಡಿಸಿ, ಬರಬೇಕಾದ ಬಾಕಿಗಳ, ಕೊಡಬೇಕಾದ ಬಾಕಿಗಳನ್ನು, ಹೊಂದಾಣಿಕೆ ಲೆಕ್ಕಗಳನ್ನು ಅಂತಿಮಗೊಳಿಸಿ ಲೆಕ್ಕಪತ್ರಗಳ ಅಂದರೆ ವಾರ್ಷಿಕ ಜಮಾ-ಖರ್ಚು, ವ್ಯಾಪಾರಿ ತಖ್ತೆ ಲಾಭ ನಷ್ಟ ಖಾತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆ ಸಿದ್ಧಪಡಿಸುವುದು ಒಂದು ಹಂತ. ಈ ವ್ಯವಸ್ಥೆಗಾಗಿ ಲೆಕ್ಕಪರಿಶೋಧಕರನ್ನು ಅವಲಂಬಿಸುವುದು ಸಲ್ಲದು. ಅವರ ಸಲಹೆ ಹಾಗೂ ಮಾರ್ಗದರ್ಶನ ಪಡೆದು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು, ಲೆಕ್ಕ ವಿಭಾಗದವರಿಂದ ಈ ಕಾರ್ಯ ನಡೆಯಬೇಕು. ವಿಳಂಬ ಮಾಡಬಾರದು. ನಂತರದಲ್ಲಿ ಲೆಕ್ಕಪರಿಶೋಧನೆಗೆ ಸಿದ್ಧತೆ ಮಾಡುವುದು ಎರಡನೇ ಹಂತವಾಗುತ್ತದೆ. ವಾರ್ಷಿಕ ಮಹಾಸಭೆಯ ಮೂಲಕ ನೇಮಕವಾಗಿರುವ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸುವ ಕ್ರಮವಿಡಬೇಕಾಗುತ್ತದೆ.

ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವುದು, ಬಜೆಟ್ ಸಿದ್ಧಪಡಿಸುವುದು 3ನೇ ಹಂತವಾಗುತ್ತದೆ. ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಾಗ ಕಳೆದ ವರ್ಷದ ಯೋಜನೆಗಳ ಅನುಷ್ಠಾನದಲ್ಲಿ ಆಗಿರುವ ಲೋಪದೋಷಗಳ ನಿವಾರಣೆಗೆ ಕ್ರಮ, ಹೊಸ ಯೋಜನೆಗಳ ಅಳವಡಿಸುವಿಕೆ, ಅಗತ್ಯ ಸಂಪನ್ಮೂಲಗಳ ಕ್ರೋಢೀಕರಣಗಳ ಬಗ್ಗೆ ಚಿಂತನೆಗಳನ್ನು ನಡೆಸಿದ ನಂತರ ಬಜೆಟ್ ಸಿದ್ಧಪಡಿಸುವುದು.

> “ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವುದು, ಬಜೆಟ್ ಸಿದ್ಧಪಡಿಸುವುದು 3ನೇ ಹಂತವಾಗುತ್ತದೆ. ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಾಗ ಕಳೆದ ವರ್ಷದ ಯೋಜನೆಗಳ ಅನುಷ್ಠಾನದಲ್ಲಿ ಆಗಿರುವ ಲೋಪದೋಷಗಳ ನಿವಾರಣೆಗೆ ಕ್ರಮ, ಹೊಸ ಯೋಜನೆಗಳ ಅಳವಡಿಸುವಿಕೆ, ಅಗತ್ಯ ಸಂಪನ್ಮೂಲಗಳ ಕ್ರೋಢೀಕರಣಗಳ ಬಗ್ಗೆ ಚಿಂತನೆಗಳನ್ನು ನಡೆಸಿದ ನಂತರ ಬಜೆಟ್ ಸಿದ್ಧಪಡಿಸುವುದು.”

ಸೌಹಾರ್ದ ಸಹಕಾರಿಗಳ ಬಜೆಟ್ ವೈಜ್ಞಾನಿಕವಾಗಿರಬೇಕು. ಕಳೆದ ವರ್ಷದ ಆದಾಯ, ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು, ಈ ವರ್ಷದ ಯೋಜನೆಗಳು, ಅಗತ್ಯವಾಗುವ ಹಣಕಾಸು ಮೂಲ ಸಂಗ್ರಹಣೆಗೆ ವ್ಯವಸ್ಥೆಗಳಿಂದ ಈ ವರ್ಷದ ಆದಾಯ ಕಳೆದ ವರ್ಷದ ವೆಚ್ಚಗಳು ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಗಳು, ಈ ವರ್ಷದ ವೆಚ್ಚಗಳು ವೆಚ್ಚಗಳಿಗಿಂತ ಹೆಚ್ಚಿಗೆ ಆದಾಯವಿರುವ, ಸಹಕಾರಿ ವಿವಿಧ ಸೇವೆಗಳನ್ನು ಸಲ್ಲಿಸಿ ಲಾಭಗಳಿಸುವ ಮತ್ತು ಸಹಕಾರಿಯ ಉಪವಿಧಿಗಳಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವ ರೀತಿಯಲ್ಲಿ ಬಜೆಟ್ ಸಿದ್ಧಪಡಿಸಬೇಕು. ನಂತರದಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ಸಿದ್ಧತೆ ಪ್ರಾರಂಭವಾಗಬೇಕು.

ರಾಜ್ಯದ ಸೌಹಾರ್ದ ಸಹಕಾರಿಗಳು ನೂತನ ವರ್ಷದ ಪ್ರಾರಂಭಿಕ ಸಿದ್ಧತೆಗಳನ್ನು ಆದ್ಯತೆಯ ಮೇಲೆ ದಕ್ಷತೆಯಿಂದ ನಿರ್ವಹಿಸಿ ಸಹಕಾರಿ ಕ್ಷೇತ್ರದದಲ್ಲಿ ಪಾರದರ್ಶಕ, ವೃತ್ತಿಪರ ಹಾಗೂ ಪ್ರಗತಿಪರ ಸಹಕಾರಿ ಸಂಸ್ಥೆಗಳೆಂದು ಗುರುತಿಸಿಕೊಳ್ಳೋಣ.

▶▶ **ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ಕರ್ನಾಟಕ ಬಜೆಟ್ 2015–16 : ಸಾಮಾಜಿಕ ನ್ಯಾಯ, ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನ ಸಹಕಾರ ಇಲಾಖೆಗೆ ರೂ. 1300 ಕೋಟಿ ........ 4

ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳು ಸಹಕಾರಿಯ ಅಸ್ತಿತ್ವ ಹಾಗೂ ಕಾರ್ಯಚಟುವಟಿಕೆಗಳನ್ನು ಬಿಂಬಿಸುತ್ತವೆ – ಜಾಂತಿಕರ ........ 5

ಸಹಕಾರಿ ಸಂಸ್ಥೆಗಳು ಸಹಕಾರ ತತ್ವ ಸಾಮಾಜಿಕ ಕಳಕಳಿಯ ಅನುಷ್ಠಾನಕ್ಕಾಗಿ ಒಂದು ಆದ್ಯತಾ ವಲಯದ ಆಯ್ಕೆಮಾಡಿಕೊಂಡು ಕಾರ್ಯನಿರ್ವಹಿಸಿದಾಗ ಸಂಸ್ಥೆಯ ಘನತೆ ಗೌರವ ಹೆಚ್ಚುತ್ತದೆ – ಎಸ್.ಆರ್. ಸತೀಶಚಂದ್ರ ........ 6

ಏಪ್ರಿಲ್ 23, 24 ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ವಿಶೇಷ ಪ್ರವೇಶ ತರಬೇತಿ ........ 7

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ 13ನೇ ತಂಡದ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ ........ 8

ಲಾಭಗಳಿಸುವ ಜೊತೆಗೆ ಸಾಮಾಜಿಕ ಅಭಿವೃದ್ಧಿಯತ್ತ ಗಮನಹರಿಸುವುದು ಶ್ರೇಯಸ್ಕರ – ಲಕ್ಷ್ಮೀಕಾಂತರೆಡ್ಡಿ ........ 9

ಚನ್ನಕೇಶವಪುರ ಕುಡಿಯುವ ನೀರಿನ ಘಟಕದ ಲೋಕಾರ್ಪಣೆ ........ 10

ಸುಭದ್ರವಾದ ಸಂಸ್ಥೆಗಳನ್ನು ನಿರ್ಮಿಸುವ ಮೂಲಸೂತ್ರಗಳು ........ 12

ಸಹಕಾರ ಸಂಸ್ಥೆಗಳಿಗೆ ನೇರ ತೆರಿಗೆ ಅಭಿವೃದ್ಧಿಗೆ ಮಾರಕ 'ನೇರ ತೆರಿಗೆ ಸಂಹಿತೆ' ........ 14

ಸಹಕಾರ ಬ್ಯಾಂಕು / ಸಂಸ್ಥೆಗಳಲ್ಲಿ ಷೇರು ಪ್ರೀಮಿಯಮ್ : ಹೊಸ ಚಿಂತನೆ ........ 16

ಕರ್ನಾಟಕ ರಾಜ್ಯದ ಸಹಕಾರ ನೀತಿ ........ 18

# ಸಂಪಾದಕೀಯ

## ಸಹಕಾರಿಯ ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳು - ಸಂಯುಕ್ತ ಸಹಕಾರಿಯ ಚಿಂತನೆ

ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ವಿಶ್ವದ ಅರ್ಥ ವ್ಯವಸ್ಥೆಯಲ್ಲಿ, ಪೈಪೋಟಿಯನ್ನು ಎದುರಿಸಿ ಸಹಕಾರ ಸಂಸ್ಥೆಗಳು ಬಾಳಿ ಬದುಕಬೇಕು. ಇದಕ್ಕಾಗಿ ಸಾಂಪ್ರದಾಯಿಕ ಆರ್ಥಿಕ ನೀತಿ ರೂಢಿಗಳಿಂದ ಹೊರಬಂದು ಆಧುನಿಕತೆಯನ್ನು ಅಳವಡಿಸಿ, ತಾಂತ್ರಿಕತೆಯನ್ನು ರೂಢಿಸಿಕೊಂಡು ಉತ್ತಮ ಆರ್ಥಿಕ ಸಂಘಟನೆಗಳಾಗಿ ನಿಲ್ಲಬೇಕಿದೆ. ಅದಕ್ಕಾಗಿ ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳು ಬೇಕು.

ದೃಷ್ಟಿ ಅಂದರೆ ದೂರ ದೃಷ್ಟಿ. ಸಹಕಾರಿ ಸಂಸ್ಥೆಗಳಿಗೆ ಮುಂಬರುವ ದಿನಗಳಲ್ಲಿ ಏನನ್ನು ಸಾಧಿಸುತ್ತೇವೆ ಎಂಬ ಒಂದು ವಿಷನ್ ಇರುವುದು ಅವಶ್ಯಕ. ಧ್ಯೇಯ ಅಂದರೆ ನಮ್ಮ ದೃಷ್ಟಿಯತ್ತ ನಾವು ಹೇಗೆ ನಡೆಯುತ್ತೇವೆ ಎಂಬುದು ಹಾಗೂ ಸಹಕಾರಿಯ ದೃಷ್ಟಿ ಸಾಧನೆಯತ್ತ ನಡೆಯಲು ಅನುಸರಿಸುವ ಮಾರ್ಗ ಯಾವ ಮೌಲ್ಯಗಳ, ಆಧಾರದ ಮೇಲೆ ಇರುತ್ತದೆ ಎಂಬುದು ಮಹತ್ವದ ವಿಷಯ.

ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ಕಾಯ್ದೆಗಳಿವೆ. ನಿಯಮಗಳಿವೆ. ಸಹಕಾರಿ ತತ್ವಗಳಿವೆ. ಪ್ರತಿಯೊಂದು ಸಹಕಾರಿಗಳಿಗೆ ತಮ್ಮದೇ ಆದ ಉಪವಿಧಿಗಳಿವೆ. ಇವುಗಳ ಆಧಾರದ ಮೇಲೆ ಪ್ರತಿಯೊಂದು ಸಹಕಾರಿಯು ತನ್ನ ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸಿದರೆ ಪ್ರಗತಿ ಸಾಧನೆ ಚುರುಕಾಗುತ್ತದೆ. ಸಹಕಾರಿ ಕ್ಷೇತ್ರ ದೇಶದ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುವ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳನ್ನು ಸಿದ್ಧಪಡಿಸುವಾಗ ಆಡಳಿತ ಮಂಡಲಿಯ ಹಾಗೂ ಸಿಬ್ಬಂದಿಯವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಪ್ರಚುರ ಪಡಿಸುವುದು ಉತ್ತಮ ಸಂಪ್ರದಾಯ.

ಸಂಯುಕ್ತ ಸಹಕಾರಿಯು ತನ್ನ ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳ ಸಿದ್ಧತೆಗಾಗಿ ಕಾರ್ಯಾಗಾರ ಏರ್ಪಡಿಸಿ ಸಿಬ್ಬಂದಿಯವರ ಅಭಿಪ್ರಾಯಗಳನ್ನು ಸಂಗ್ರಹಿಸಿರುವುದು ಸ್ವಾಗತಾರ್ಹ. ಇದೇ ರೀತಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಕ್ರಮವಿಡುವುದು ಅವಶ್ಯಕವೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.




ಜ್ಞಾನವು ಶಬ್ದವಾಗಿ ಕಿವಿಗಳ ಮೂಲಕ ನಮ್ಮೊಳಗೆ ಪ್ರವೇಶಿಸುತ್ತದೆ. ರೂಪವಾಗಿ ಕಣ್ಣುಗಳ ಮೂಲಕ ನಮ್ಮ ಒಳಗೆ ಪ್ರವೇಶಿಸುತ್ತದೆ. ನಾವು ಏನನ್ನೂ ಕೇಳದಿದ್ದರೆ, ನೋಡದಿದ್ದರೆ, ಜ್ಞಾನಗಂಗೆಯು ನಮ್ಮೊಳಗೆ ಪ್ರವೇಶಿಸುವುದಾದರೂ ಹೇಗೆ? ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ ಈ ಜ್ಞಾನೇಂದ್ರಿಯಗಳನ್ನೇ ಬಳಸದಿದ್ದರೆ ಹೇಗೆ? ಅದರಿಂದ ಜ್ಞಾನದ ದ್ವಾರವೇ ಮುಚ್ಚಿ ಹೋಗಿ ನಾವು ಕತ್ತಲೆಯಲ್ಲಿ ಬಾಳಬೇಕಾದೀತು. ಆಗ ನಾವು ಎಲ್ಲಿ ಹೆಜ್ಜೆ ಇಡಬೇಕು ಎಲ್ಲಿ ಹೆಜ್ಜೆ ಇಡಬಾರದು ಎಂಬುದು ತಿಳಿಯದಂತಾಗಿ ಜೀವನದಲ್ಲಿ ಬೀಳುವ ಏಳುವ ಪ್ರಸಂಗ ಬರಬಹುದು.

ಇಂಥ ಪ್ರಸಂಗದಲ್ಲಿ ಅನುಭಾವಿಗಳ ನುಡಿಯು ಜ್ಞಾನದೀವಿಗೆಯಾಗಿ ನಮಗೆ ದಾರಿತೋರಿಸುತ್ತದೆ. ಅಂಥ ಮಹಾತ್ಮರ ನುಡಿಗಳನ್ನು ನಾವು ನಿತ್ಯ ನಿರಂತರ ಕೇಳುತ್ತಿರಬೇಕು. ಆ ಕುರಿತು ಅನುಭಾವಿ ಕವಿ ಸೋಮೇಶ್ವರರು ಹೇಳುತ್ತಾರೆ –

ಕೆಲವಂ ಬಲ್ಲವರಿಂದ ಕಲ್ತು,
ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು,
ಕೆಲವಂ ಸುಜ್ಞಾನದಿಂ ನೋಡುತಂ।
ಕೆಲವಂ ಸಜ್ಜನ ಸಂಗದಿಂದಲರಿಯಲ್
ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರ
ಶ್ರೀ ಚೆನ್ನಸೋಮೇಶ್ವರಾ॥

ಬಲ್ಲವರ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುವುದು, ಶಾಸ್ತ್ರಗಳನ್ನು ಶ್ರದ್ಧೆಯಿಂದ ಕೇಳುವುದು, ಸತ್ಕಾರ್ಯಗಳ ಮಾಡುವವರನ್ನು ನೋಡುವುದು, ನಾವೇ ನಮ್ಮ ಅಂತರಂಗದಲ್ಲಿ ಇರುವ ಜ್ಞಾನದ ಕಣ್ಣನ್ನು ತೆರೆದು ತಿಳಿಯುವುದು, ಸಜ್ಜನರ ಸಂಗದಲ್ಲಿ ಇದ್ದು ಅನುಭವಿಸುವುದು ಇವೇ ಜ್ಞಾನಾರ್ಜನೆಯ ಐದು ಸುಲಭೋಪಾಯಗಳು.

ಓರ್ವ ವಿದೇಶದ ತತ್ವಜ್ಞಾನಿ 'ಜ್ಞಾನವೇ ನೀತಿ' ಎಂದಿದ್ದಾನೆ. ನೀತಿಯು ನಾವು ನಡೆಯುವ ದಾರಿಯಾದರೆ, ಜ್ಞಾನವು ನಾವು ನಡೆಯುವ ದಾರಿಯನ್ನು ತೋರುವ ದಾರಿ ದೀಪವಾಗಿದೆ. ಉಡಿಗೆ–ತೊಡಿಗೆಗಳಿಂದ ನಾವು ಬಹಿರಂಗವನ್ನು ಅಲಂಕರಿಸಿ ಆನಂದಿಸುತ್ತೇವೆ. ಹಾಗೇ ನಾವು ಸದ್ಗುಣ ಸತ್ಕಾರ್ಯಗಳಿಂದ ನಮ್ಮ ಅಂತರಂಗವನ್ನು ಅಲಂಕರಿಸಬೇಕು. ಅದರಿಂದ ನಮಗೆ ಶಾಶ್ವತವಾಗಿ ಸುಖ–ಸಂತೋಷ ದೊರೆಯುತ್ತದೆ. ಅಂಥ ಆದರ್ಶ ಬದುಕು ನಮ್ಮದಾಗಬೇಕಾದರೆ ನಾವು ಬಲ್ಲವರ ಮಾತುಗಳನ್ನು ಒಲಿದಾಲಿಸಲೇಬೇಕು.

## ಕರ್ನಾಟಕ ಬಜೆಟ್ 2015–16 : ಸಾಮಾಜಿಕ ನ್ಯಾಯ, ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನ ಸಹಕಾರ ಇಲಾಖೆಗೆ ರೂ. 1300 ಕೋಟಿ



ರಾಜ್ಯದ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಮುಖ್ಯ ಮಂತ್ರಿಗಳಾಗಿ 3ನೇ ಬಾರಿಗೆ, ಹಣಕಾಸು ಸಚಿವರಾಗಿ 10ನೇ ಬಾರಿಗೆ ರಾಜ್ಯದ ಮುಂಗಡ ಪತ್ರವನ್ನು ಮಂಡಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಈ ವರ್ಷದ ಬಜೆಟ್ ಗಾತ್ರ ರೂ 1,42,534 ಕೋಟಿಗಳಷ್ಟಿದ್ದು ಶೇಕಡಾ 3.28 ಹೆಚ್ಚಳ ಕಂಡಿದೆ. ಅದರಂತೆ ಯೋಜನಾ ಗಾತ್ರದಲ್ಲಿಯೂ ರೂ.72,597 ಕೋಟಿಗಳಷ್ಟಿದ್ದು ಶೇಕಡಾ 10.67 ಹೆಚ್ಚಳವಾಗಿರುವುದು ಗಮನಾರ್ಹ. ರಾಜ್ಯದ ಎಲ್ಲ ಕ್ಷೇತ್ರಗಳಿಗೂ ಅನುದಾನ ಹಾಗೂ ಅವಕಾಶಗಳನ್ನು ಒದಗಿಸಲು ಪ್ರಯತ್ನಿಸಿದ್ದಾರೆ. ಸಹಕಾರ ಇಲಾಖೆಗೆ 1300 ಕೋಟಿರೂಗಳನ್ನು ಒದಗಿಸಿದ್ದಾರೆ. ಇದು ಸಾಲದು. ಇನ್ನು ಹೆಚ್ಚು ಅವಕಾಶ ಒದಗಿಸಬೇಕಿತ್ತು ಎಂದು ಸಹಕಾರಿಗಳ ಹಾಗೂ ಸೌಹಾರ್ದ ಸಹಕಾರಿಗಳ ಅಭಿಪ್ರಾಯವಾಗಿದೆ.

ಮುಂಗಡ ಪತ್ರದಲ್ಲಿರುವಂತೆ ಸಹಕಾರಿ ಇಲಾಖೆಗೆ ದೊರಕಿರುವ ಅವಕಾಶಗಳು.

- 23 ಲಕ್ಷ ರೈತರಿಗೆ 10,000 ಕೋಟಿ ರೂಗಳ ಸಾಲ.
- ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ 110 ಕೋಟಿ.
- ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸ್ಥಾಪನೆಗೆ ಕ್ರಮ.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಗೋದಾಮು ನಿರ್ಮಾಣಕ್ಕೆ 5 ಕೋಟಿ.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಶುದ್ಧೀಕರಣ ಮತ್ತು ವರ್ಗೀಕರಣ ಯಂತ್ರೋಪಕರಣಗಳ ಖರೀದಿ ಹಾಗು ಉತ್ತಮ ಮಾರುಕಟ್ಟೆ ವ್ಯವಸ್ಥೆಗೆ 3 ಕೋಟಿ.
- ಬಿ.ಪಿ.ಎಲ್. ಕುಟುಂಬದ ಕನಿಷ್ಠ ಒಬ್ಬರಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯತ್ವಕ್ಕೆ ಷೇರು ಧನ ಸೌಲಭ್ಯ ರೂ. 32 ಕೋಟಿ
- 50 ಪ್ರಮುಖ ಎ.ಪಿ.ಎಮ್.ಸಿ.ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ರೂ.5 ಕೋಟಿ.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯ "ದೃಷ್ಟಿ, ಧ್ಯೇಯ ಮತ್ತು ಮೌಲ್ಯಗಳನ್ನು (Vision, Mission and Values) ಸೃಷ್ಟಿಸುವ ಮತ್ತು ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ"

## ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳು ಸಹಕಾರಿಯ ಅಸ್ತಿತ್ವ ಹಾಗೂ ಕಾರ್ಯಚಟುವಟಿಕೆಗಳನ್ನು ಬಿಂಬಿಸುತ್ತವೆ - ಜಾಂತಿಕರ



ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ 2 ದಿನಗಳ "ದೃಷ್ಟಿ, ಧ್ಯೇಯ ಮತ್ತು ಮೌಲ್ಯಗಳನ್ನು (Vision, Mission and Values) ಸೃಷ್ಟಿಸುವ ಮತ್ತು ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ"ವನ್ನು ದಿನಾಂಕ : 14, 15 ಮಾರ್ಚ್ 2015 ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಶಿಬಿರದ ಉದ್ಘಾಟನೆಯನ್ನು ನೇರವೇರಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಿಬ್ಬಂದಿಯವರಿಗೆ ಪ್ರತಿ 6 ತಿಂಗಳಿಗೊಂದು ಬಾರಿ ವಿವಿಧ ವಿಷಯಗಳಲ್ಲಿ ತರಬೇತಿಯನ್ನು ನೀಡುವ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯು ಮಾಡುತ್ತ ಬಂದಿದೆ. ಈ ಬಾರಿಯು ತರಬೇತಿ ಕೇವಲ ಒಂದು ತರಬೇತಿಯಾಗಿರದೆ ಸಂಯುಕ್ತ ಸಹಕಾರಿಯ ದೃಷ್ಟಿ, ಧ್ಯೇಯ ಹಾಗೂ ಧೋರಣೆಗಳನ್ನು ಸಿದ್ಧಪಡಿಸುವ ಕಾರ್ಯಾಗಾರವಾಗಿದೆ. ಇದರಲ್ಲಿ ಎಲ್ಲರೂ ಕ್ರಿಯಾಶೀಲರಾಗಿ ಭಾಗವಹಿಸಬೇಕು. ದೃಷ್ಟಿ, ಧ್ಯೇಯ ಹಾಗು ಮೌಲ್ಯಗಳು ಸಹಕಾರಿಯ ಅಸ್ತಿತ್ವ ಹಾಗೂ ಕಾರ್ಯಚಟುವಟಿಕೆಗಳನ್ನು ಬಿಂಬಿಸುತ್ತವೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ್ ನಾಯಕ್‌ರವರು ಮಾತನಾಡಿ ಶಿಕ್ಷಣ ತರಬೇತಿಗಳು ಪ್ರತಿಯೊಬ್ಬರಿಗೂ ಅವರ ಜೀವನದುದ್ದಕ್ಕೂ ಅವಶ್ಯಕವಾಗಿರುವ ವಿಷಯ. ಸಂಸ್ಥೆಯ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯ. ಸಂಯುಕ್ತ ಸಹಕಾರಿಯವರು ಅತ್ಯಂತ ಉತ್ಸಾಹದಿಂದ ಹಾಗೂ ದಕ್ಷತೆಯಿಂದ ಉತ್ತಮವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯ ಎಂದರು ತಿಳಿಸಿದರು.

ಪ್ರಾಸ್ತಾವಿಕವನ್ನು ನಡೆಸಿಕೊಟ್ಟ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರ ತರಬೇತಿ ಎಂದರೆ ನಮ್ಮಲ್ಲಿರುವ ಕೌಶಲ್ಯವನ್ನು, ಜ್ಞಾನವನ್ನು ಕ್ರಿಯಾಶೀಲಗೊಳಿಸುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಸ್ವಾಗತವನ್ನು ಗುಲ್ಬರ್ಗಾ ವಿಭಾಗದ ಅಧಿಕಾರಿ ಶ್ರೀ ರಾಜಶೇಖರ್ ಹೆಚ್. ವಂದನಾರ್ಪಣೆಯನ್ನು ಗುಲ್ಬರ್ಗಾ ವಿಭಾಗೀಯ ಕಿರಿಯ ಅಧಿಕಾರಿ ಶ್ರೀ ಸಂಜಯ್ ಕೊರಟಕರ್‌ರವರು ನಡೆಸಿಕೊಟ್ಟರು. ಮೊದಲನೆಯ ದಿನದ 1ನೇ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿ ಸಿಬ್ಬಂದಿಯವರು ಅವಶ್ಯವಾಗಿ ತಿಳಿದಿರಬೇಕಾದ ವಿಷಯಗಳ ಬಗ್ಗೆ ಪುನರ್ಮನನ ಮಾಡಿದ ನಂತರ ಸಿಬ್ಬಂದಿಯವರು ಶಿಸ್ತಿನಿಂದ ದಕ್ಷತೆಯಿಂದ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿ ಸಂಯುಕ್ತ ಸಹಕಾರಿಯ ಘನತೆಯನ್ನು ಗೌರವವನ್ನು ಹೆಚ್ಚಿಸುವ ಪ್ರಯತ್ನಮಾಡಲು ಕರೆ ನೀಡಿದರು.

2ನೇ ಅವಧಿಯಲ್ಲಿ ಶ್ರೀ ಯಶವಂತ್ ಡೋಂಗ್ರೆಯವರು ಸಂಯುಕ್ತ ಸಹಕಾರಿಗೆ ಒಂದು Vision, Mission and Values Statement ಅಗತ್ಯತೆ. ಎಂಬುದನ್ನು ತಿಳಿಸಿ ಅದರ ಬಗ್ಗೆ ಎಲ್ಲ ಸಿಬ್ಬಂದಿಯವರ ಅಭಿಪ್ರಾಯ ಪಡೆದು ಒಂದು ಅಥವಾ ಎರಡು ವಾಕ್ಯಗಳಲ್ಲಿ ದೃಷ್ಟಿ ಧ್ಯೇಯ ಹಾಗು ಮೌಲ್ಯಗಳನ್ನು ಸಿದ್ಧಪಡಿಸಬೇಕೆಂಬ ಬಗ್ಗೆ ತೀಮಾನಕ್ಕೆ ಬರಲಾಯಿತು. ಅದರಂತೆ ಕಾರ್ಯಾಗಾರ ನಡೆಸಲಾಯಿತು. ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ನಡೆಸುವ ವಿಧಿ ವಿಧಾನಗಳ ಬಗ್ಗೆ ಶ್ರೀ ಜಿ.ಎಸ್.ಟೋಪಣ್ಣವರರವರು ತಮ್ಮ ಅನುಭವವನ್ನು, ನಂತರದಲ್ಲಿ ಒಂದು ಸಹಕಾರಿ ಸಂಸ್ಥೆಯ ಆಸ್ತಿ-ಜವಾಬ್ದಾರಿ ತಃಖ್ತೆ ಓದುವುದು, ಲಾಭ-ನಷ್ಟ ತಃಖ್ತೆ ಓದುವುದು ಅದರ ಮೇಲೆ ಸಂಸ್ಥೆಯ ಹಣಕಾಸಿನ ಸ್ಥಿತಿಗತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ ಎಂದರು. ನಂತರ ಡಾ.ಎಸ್.ಎ.ಸಿದ್ಧಾಂತಿಯವರು, ವ್ಯಕ್ತಿತ್ವ ವಿಕಸನ - Team Building, Motivation and Work Environment Management ಬಗ್ಗೆ ಶ್ರೀ ಬಿ.ಎಸ್. ರವಿಪ್ರಕಾಶ್‌ರವರು ಉಪನ್ಯಾಸ ನೀಡಿದರು. ಈ ಶಿಬಿರದಲ್ಲಿ ಸಂಯುಕ್ತ ಸಹಕಾರಿಯ 30 ಸಿಬ್ಬಂದಿಗಳು ಭಾಗವಹಿಸಿದ್ದರು. ■

## ಸಹಕಾರಿ ಸಂಸ್ಥೆಗಳು ಸಹಕಾರ ತತ್ವ ಸಾಮಾಜಿಕ ಕಳಕಳಿಯ ಅನುಷ್ಠಾನಕ್ಕಾಗಿ ಒಂದು ಆದ್ಯತಾ ವಲಯದ ಆಯ್ಕೆಮಾಡಿಕೊಂಡು ಕಾರ್ಯನಿರ್ವಹಿಸಿದಾಗ ಸಂಸ್ಥೆಯ ಘನತೆ ಗೌರವ ಹೆಚ್ಚುತ್ತದೆ - ಎಸ್.ಆರ್. ಸತೀಶಚಂದ್ರ



ಪ್ರತಿಯೊಂದು ಸಹಕಾರ ಸಂಸ್ಥೆಯು ಸಹಕಾರ ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಸಹಕಾರ ತತ್ವಗಳ ಅನುಷ್ಠಾನವಿಲ್ಲದೆ ಸಹಕಾರ ಸಂಸ್ಥೆಗಳ ಕಾರ್ಯ ಪರಿಪೂರ್ಣವೆನಿಸುವುದಿಲ್ಲ. ಆದರೆ ಈ ತತ್ವಗಳ ಅನುಷ್ಠಾನ ಜನಸಾಮಾನ್ಯರಿಗೆ ತಲುಪುವಂತಿರಬೇಕು. ಸಾಮಾಜಿಕ ಅನೇಕ ತೊಂದರೆಗಳನ್ನು ನಿವಾರಿಸಬಹುದಾದ ವಿಷಯಗಳಲ್ಲಿ ಒಂದನ್ನು ಆಯ್ಕೆಮಾಡಿ ಅದರ ಅನುಷ್ಠಾನಕ್ಕೆ ಒತ್ತು ಕೊಡುವ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು.

ಉದಾಹರಣೆಗೆ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಯೋಜನೆಗಳು, ಬಡವರ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು, ಆಹಾರ ದುರ್ಬಳಕೆ ತಡೆಟ್ಟುವ ತಿಳುವಳಿಕೆ ನೀಡುವ ಕಾರ್ಯ, ಸಾಮಾಜಿಕ ಜವಾಬ್ದಾರಿಗಳ ನಿರ್ವಹಣೆಯ ಕಾರ್ಯಗಳು, ಸಾಮಾಜಿಕ ಆರೋಗ್ಯ ನಿರ್ವಹಣೆ, ಅನಕ್ಷರಸ್ಥರಿಗೆ ಅಕ್ಷರಜ್ಞಾನ ಕಾರ್ಯಕ್ರಮ, ಶಾಲೆ ಬಿಟ್ಟ ಮಕ್ಕಳಿಗೆ ಪುನಃ ಶಾಲೆ ಸೇರಿಸುವ ಕಾರ್ಯಕ್ರಮ, ಶಾಲೆಗಳಿಗೆ ಪುಸ್ತಕ ಹಾಗೂ ಯುನಿಫಾರ್ಮ್‌ಗಳನ್ನು ಒದಗಿಸುವುದು, ಶಾಲೆಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವುದು, ಶಾಲೆಯ ಮಕ್ಕಳ ಆರೋಗ್ಯ ತಪಾಸಣೆ ಮಾಡಿಸುವುದು, ಊರಿನ ಮಕ್ಕಳಿಗಾಗಿ ಉದ್ಯಾನವನಗಳ ನಿರ್ವಹಣೆ, ಊರಿನ ಪ್ರಮುಖ ಸ್ಥಳಗಳಲ್ಲಿ, ಶಾಲೆ, ಆಸ್ಪತ್ರೆಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಪ್ರತಿ ಮಾಹೆ ನಿರಂತರವಾಗಿ ಹಮ್ಮಿಕೊಳ್ಳುವುದು, ಅಂಗವಿಕಲರಿಗಾಗಿ ವಿಶೇಷ ಸೌಲಭ್ಯಗಳ ನಿರ್ವಹಣೆ, ಪರಿಸರ ಸಂರಕ್ಷಣೆ ಹೀಗೆ ಹತ್ತು ಹಲವಾರು ಸಾಮಾಜಿಕ ಕಳಕಳಿಯ ಕಾರ್ಯಗಳನ್ನು ಸಹಕಾರಿಯವರು ಹಮ್ಮಿಕೊಡಾಗ ಸಹಕಾರಿ ಸಂಸ್ಥೆಗಳ ಬಗ್ಗೆ ಪರಿಸರದಲ್ಲಿ ಉತ್ತಮ ಅಭಿಪ್ರಾಯ ಬರುತ್ತದೆ ಹಾಗೂ ಸಹಕಾರಿ ಸಂಸ್ಥೆಗೆ ಒಂದು ಇಮೇಜ್ ಸ್ಥಾಪಿತವಾಗುತ್ತದೆ. ಸಾಮಾನ್ಯ ಜನರ ಉತ್ತಮ ಅಭಿಪ್ರಾಯದಿಂದ ಸಹಕಾರಿಯ ಕಾರ್ಯ ಚಟುವಟಿಕೆಗಳಲ್ಲಿ ಅಭಿವೃದ್ಧಿ ಯಾಗುವುದು ಸಾಧ್ಯವಾಗುತ್ತದೆ. ಸಹಕಾರಿ ಸಂಸ್ಥೆಗಳು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿ ಕೊಳ್ಳಲು ಇದೊಂದು ಉತ್ತಮ ಸಾಧನವಾಗುತ್ತದೆ ಎಂದರು. ■

## ಶಿವಮೊಗ್ಗ ಮಾಮ್ಕೋಸ್ ಸಂಸ್ಥೆಯ ಉಪಾಧ್ಯಕ್ಷರಾಗಿ ಯಡಗೆರೆ ಸುಬ್ರಮಣ್ಯ ಅವಿರೋಧ ಆಯ್ಕೆ



ಯಡಗೆರೆ ಸೌಹಾರ್ದ ಸಹಕಾರಿ ಅಧ್ಯಕ್ಷರೂ, ಸೀತುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರೂ ಆಗಿರುವ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನ ಯಡಗೆರೆಯವರಾದ ಶ್ರೀ ಸುಬ್ರಮಣ್ಯರವರು ಮಾಮ್ಕೋಸ್ ಸಂಸ್ಥೆಯ (ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಗಳ ವ್ಯಾಪ್ತಿಯಿರುವ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ, ಶಿವಮೊಗ್ಗ) ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ಇವರು ಹಿರಿಯ ಸಹಕಾರಿ ಶ್ರೀ ನರಸಿಂಹ ನಾಯಕ ರವರ ಅಧ್ಯಕ್ಷತೆಯಲ್ಲಿ ಮಾಮ್ಕೋಸ್ ನಿರ್ದೇಶಕರಾಗಿ ಹಲವಾರು ಉತ್ತಮ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಅನುಭವ, ಚಿಕ್ಕಮಗಳೂರು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಪಡೆದಿದ್ದಾರೆ. ಶ್ರೀ ಸುಬ್ರಮಣ್ಯರವರು ಇತ್ತೀಚೆಗಷ್ಟೆ ಸಹಕಾರ ಭಾರತಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಯುವ ಸಹಕಾರಿ ಶ್ರೀ ಸುಬ್ರಮಣ್ಯರವರಿಗೆ ಈ ಗೌರವ ಪ್ರಾಪ್ತವಾಗಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ. ಜಿಲ್ಲಾಧಿಕಾರಿಗಳು ಪದನಿಮಿತ್ತ ಈ ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ ಎಂದು ತಿಳಿಸಿದರು.




## ಉದ್ಘಾಟನೆ

ಶ್ರೀ ಹುಚ್ಚಬುಡ್ಡೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಪೋತ್ನಾಳ ತಾ. ಮಾನವಿ, ಜಿಲ್ಲಾ ರಾಯಚೂರು. ಮುಖ್ಯ ಶಾಖೆಯನ್ನು ಶ್ರೀ ಶ್ರೀ ಶ್ರೀ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯರು ಹಾಗೂ ಶ್ರೀ ಶ್ರೀ ಬಸವಲಿಂಗಮ್ಮ ಅಮ್ಮನವರಿಂದ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಂ.ಮಲ್ಲಿಕಾರ್ಜುನ, ಉಪಾಧ್ಯಕ್ಷರಾದ ಶ್ರೀ ಸತ್ಯನಾರಾಯಣ ಕೊಂಡ, ಸಹಕಾರಿಯ ಎಲ್ಲಾ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಎಲ್ಲಾ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಏಪ್ರಿಲ್ 23, 24 ಹೊಸದಾಗಿ ನೋಂದಣೆಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ವಿಶೇಷ ಪ್ರವೇಶ ತರಬೇತಿ

ಹೊಸದಾಗಿ ನೋಂದಣೆಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ ಹಾಗೂ ಮುಖ್ಯಾಕಾರ್ಯನಿರ್ವಾಹಕರಿಗೆ ವಿಶೇಷ ಪ್ರವೇಶ ತರಬೇತಿಯನ್ನು ದಿನಾಂಕ 23 ಹಾಗೂ 24 ಏಪ್ರಿಲ್ 2015 ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.

ಈ ತರಬೇತಿಯಲ್ಲಿ ಬೆಂಗಳೂರು ವಿಭಾಗ, ಮೈಸೂರು ವಿಭಾಗ ಹಾಗೂ ಗುಲ್ಬರ್ಗಾ ವಿಭಾಗಗಳಲ್ಲಿ ನೂತನವಾಗಿ ನೋಂದಾವಣೆಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಸಕ್ತ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು (ಒಂದು ಸಹಕಾರಿಯಿಂದ ಇಬ್ಬರು ಮಾತ್ರ) ಭಾಗವಹಿಸಬಹುದಾಗಿದೆ. ಭಾಗವಹಿಸುವವರು ತಮ್ಮ ವಿವರಗಳನ್ನು ತಲಾ ರೂ. 200/– ಪ್ರವೇಶ ಶುಲ್ಕದೊಂದಿಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿಗೆ ಕಳುಹಿಸುವುದು. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ವಿವರಗಳನ್ನು ಕಳುಹಿಸಲು ಕಡೆಯ ದಿನ 18–4–2015.




## ಇ–ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆ

ಶ್ರೀ ಗೃಹಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಇ–ಸ್ಟಾಂಪಿಂಗ್ ಕೇಂದ್ರವನ್ನು ನಿಪ್ಪಾಣಿಯಲ್ಲಿ ನಗರಾಧ್ಯಕ್ಷರಾದ ಶ್ರೀಮತಿ ನಮ್ರುತಾ ಕಮತೆಯವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿ ಗಣ್ಯರು ಭಾಗವಹಿಸಿದ್ದರು.


## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ 13ನೇ ತಂಡದ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

ಕಳೆದ 6 ವರ್ಷಗಳಿಂದ ಪ್ರತಿ 6 ತಿಂಗಳಿಗೊಮ್ಮೆ ಏರ್ಪಡಿಸುತ್ತಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 13ನೇ ತಂಡವನ್ನು ಈ ಬಾರಿ ದಿನಾಂಕ : 11–06–2015 ರಿಂದ 20–06–2015ರವರೆಗೆ ಚಂದ್ರವನ ಆಶ್ರಮ, ಶ್ರೀರಂಗ ಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. 50 ಜನರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ತರಬೇತಿ ಅವಧಿಯಲ್ಲಿ ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳ ವಿವಿಧ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡಲಾಗುವುದು.

### 10 ದಿನಗಳ ತರಬೇತಿ ಅವಧಿಯಲ್ಲಿ ವಿಷಯಗಳು

1. ಸಹಕಾರ – ಸಹಕಾರ ಸಂಘ – ಸಹಕಾರ ತತ್ವಗಳು–ಸಹಕಾರ ಕಾಯ್ದೆ – ಸಹಕಾರ ಚಳುವಳಿಯ ಹುಟ್ಟು – ಬೆಳವಣಿಗೆ– ಸಾಧನೆಗಳು.
2. ಸೌಹಾರ್ದ ಸಹಕಾರ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ – ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು – ಕಾಯ್ದೆಯ ಮುಖ್ಯಾಂಶಗಳು – ಸೌಹಾರ್ದ ಸಹಕಾರಿಗಳ ಉಪವಿಧಿಗಳು – ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
3. ಕಚೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ.
4. ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ – ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ ಅವಧಿ.
5. ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾ ಖರ್ಚು – ಲಾಭ ನಷ್ಟ ಖಾತೆ – ಆಸ್ತಿ ಜವಾಬ್ದಾರಿ ತಃಖ್ತೆ – ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು – ಪ್ರಾಯೋಗಿಕ.
6. ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು. ಸಾಲಗಳ ನಿರ್ವಹಣೆ – ಗುಣಮಟ್ಟಗಳ ಸಾಲ ನೀಡಿಕೆ – ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು.
7. ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು – ಗ್ರಾಹಕ ಸೇವೆಗಳ ನಿರ್ವಹಣೆ – ಒತ್ತಡ ನಿರ್ವಹಣೆ.
8. ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ – ಆಂತರಿಕ ಸಂಬಂಧಗಳ ನಿರ್ವಹಣೆ.
9. ಪ್ರತಿ ದಿನ ಬೆಳಗ್ಗೆ ಯೋಗ – ಸಂಜೆ ಅನೌಪಚಾರಿಕ ಸಭೆಗಳು – 2 ದಿನಗಳ ಅಧ್ಯಯನ ಪ್ರವಾಸ.
10. ಪ್ರತಿನಿಧಿ ಶುಲ್ಕ ತಲಾ ರೂ. 5,000/–. ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು.
11. ನೋಂದಣಿಯ ಕೊನೆಯ ದಿನಾಂಕ : 25.05.2015

## ಶ್ರೀ ಎಚ್.ಕೆ. ಪಾಟೀಲ್ ಹಾಗೂ ಶ್ರೀ ಜಿ.ಟಿ ದೇವೇಗೌಡ ರವರಿಗೆ ಅಭಿನಂದನೆ



**ಶ್ರೀ ಎಚ್.ಕೆ. ಪಾಟೀಲ**
ಅಧ್ಯಕ್ಷರು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್‌ಗಳ ಮಹಾಮಂಡಳ ಹಾಗೂ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್‌ಗಳ ಅಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಆಗಿರುವ ಶ್ರೀ ಎಚ್.ಕೆ. ಪಾಟೀಲರವರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಹಾಲಿ ಶಾಸಕರಾದ ಶ್ರೀ ಜಿ.ಟಿ ದೇವೇಗೌಡ ಇವರುಗಳು ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಗವರ್ನಿಂಗ್ ಕೌನ್ಸಿಲ್‌ಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಶ್ರೀ ಗುರುನಾಥ ಜಾಂತಿಕರ್, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಮತ್ತು ಆಡಳಿತ ಮಂಡಳಿ ಸದಸ್ಯರುಗಳು ಶ್ರೀಯುತರನ್ನು ರಾಜ್ಯ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದಿಸಿದ್ದಾರೆ.



**ಶ್ರೀ ಜಿ.ಟಿ. ದೇವೇಗೌಡ**
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರು

## ಚಿತ್ರದುರ್ಗ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಶುದ್ಧ ಕುಡಿಯುವ ನೀರಿನ ಘಟಕಗಳ ಉದ್ಘಾಟನೆ

## ಲಾಭಗಳಿಸಿಸುವ ಜೊತೆಗೆ ಸಾಮಾಜಿಕ ಅಭಿವೃದ್ಧಿಯತ್ತ ಗಮನಹರಿಸುವುದು ಶ್ರೇಯಸ್ಕರ – ಲಕ್ಷ್ಮೀಕಾಂತರೆಡ್ಡಿ

ಚಿತ್ರದುರ್ಗ ನಗರದ ಪ್ರತಿಷ್ಠಿತ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ತನ್ನ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಶುದ್ದ ಕುಡಿಯುವ ನೀರನ್ನು ಒದಗಿಸಬೇಕೆಂಬ ಸದುದ್ದೇಶದಿಂದ ನಗರದ ವಿವಿಧೆಡೆ ಶುದ್ದ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಹೊಂದಿದ್ದು ಈ ನಿಟ್ಟಿನಲ್ಲಿ ಬ್ಯಾಂಕ್ ಸ್ವಂತ ಕಟ್ಟಡಗಳನ್ನು ಹೊಂದಿರುವ ಆರ್.ಎಂ.ಸಿ. ಯಾರ್ಡ್, ಚನ್ನಕೇಶವಪುರ ಬಡಾವಣೆ ಹಾಗೂ ಜಯಚಾಮರಾಜೇಂದ್ರ ಬಡಾವಣೆಯ ಶಾಖಾ ಆವರಣಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭ ಮಾಡಿದೆ.

ರಾಜ್ಯದ ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಚಿತ್ರದುರ್ಗ ಮರ್ಚೆಂಟ್ಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಎಸ್.ಆರ್. ಲಕ್ಷ್ಮಿಕಾಂತ ರೆಡ್ಡಿಯವರ ಸಮರ್ಥ ನಾಯಕತ್ವದಲ್ಲಿ ಚಿತ್ರದುರ್ಗ ಮರ್ಚೆಂಟ್ಸ ಸೌಹಾರ್ದ ಸಹಕಾರಿ ಬ್ಯಾಂಕು ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾಮಾಜಿಕ ಬದ್ಧತೆಯನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸುತ್ತಿದೆ. ಈ ಬ್ಯಾಂಕಿನ ವತಿಯಿಂದ ಶುದ್ಧಕುಡಿಯುವ ನೀರಿನ 3ನೇ ಘಟಕವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ನೆರವೇರಿಸಿ ಹಿರಿಯರಾದ ಶ್ರೀ ಲಕ್ಷ್ಮಿಕಾಂತ ರೆಡ್ಡಿಯವರ ನೇತೃತ್ವದಲ್ಲಿ ಬ್ಯಾಂಕು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಶ್ರೀಯುತರು ಬ್ಯಾಂಕ್ ಮೂಲಕ ಹಾಕಿಕೊಂಡಿರುವ ಯೋಜನೆಗಳು ಹಾಗೂ ಕಾರ್ಯನಿರ್ವಹಣೆ ಇತರರಿಗೆ ಮಾದರಿ ಹಾಗೂ ಅನುಕರಣೀಯ ಎಂದು ತಿಳಿಸಿ ಸಹಕಾರಿ ಬ್ಯಾಂಕಿಗೆ ಶುಭ ಕೋರಿದರು.

ಸಾರ್ವಜನಿಕರ ಹಿತದೃಷ್ಟಿಯಿಂದ ಬ್ಯಾಂಕ್ ಕೈಗೊಂಡಿರುವ ಈ ಯೋಜನೆಯಡಿಯಲ್ಲಿ 10 ಲೀಟರ್ ನೀರಿಗೆ 2.00 ರೂಪಾಯಿಗಳ ಶುಲ್ಕವನ್ನು ವಿಧಿಸಲಾಗಿದೆ. ಕಾಯಿನ್ ಬೂತ್ ಅಳವಡಿಸಿದ್ದು, ಘಟಕಗಳನ್ನು ಸಂಪೂರ್ಣ ಯಾಂತ್ರೀಕರಣಗೊಳಿಸಲಾಗಿದೆ. ಶುದ್ಧ ಕುಡಿಯುವ ನೀರಿನ ಘಟಕಗಳ ಉಪಕರಣಗಳು ಸಂಪೂರ್ಣ ಸ್ಟೈನ್‌ಲೆಸ್ ಸ್ಟೀಲ್‌ನಿಂದ ತಯಾರಾಗಿರುತ್ತವೆ.



ಕೇವಲ ನಿರ್ವಹಣಾ ವೆಚ್ಚಕ್ಕೆ ಸರಿಹೊಂದುವಂತೆ ಶುಲ್ಕವನ್ನು ವಿಧಿಸಿದ್ದು, ನಗರದ ಜನತೆಗೆ ಶುದ್ಧ ಕುಡಿಯುವ ನೀರನ್ನು ಅತೀ ಕಡಿಮೆ ದರದಲ್ಲಿ ನೀಡಲಾಗುತ್ತಿದೆ.

ದೇಶದ ಉತ್ತಮ ಹಾಗೂ ಆರೋಗ್ಯಪೂರ್ಣ ಸಮಾಜಕ್ಕೆ ಬ್ಯಾಂಕಿನ ಒಂದು ಅಳಿಲು ಸೇವೆ ಇದಾಗಿಯೆಂದು ಬ್ಯಾಂಕ್ ಅಧ್ಯಕ್ಷ ಶ್ರೀ ಲಕ್ಷ್ಮೀಕಾಂತರೆಡ್ಡಿಯವರು ತಿಳಿಸಿದ್ದಾರೆ.

ಚಿತ್ರದುರ್ಗದ ಆರ್.ಎಂ.ಸಿ. ಯಾರ್ಡ್ ಶಾಖಾ ಕಟ್ಟಡದ ಆವರಣದಲ್ಲಿ ಬ್ಯಾಂಕಿನ ಮೊದಲನೇ ಶುದ್ಧ ಕುಡಿಯುವ ನೀರಿನ ಘಟಕವನ್ನು ದಿನಾಂಕ : 16–03–2015ರಂದು ಪ್ರಾರಂಭಿಸಲಾಯಿತು. ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ.ಎಚ್.ತಿಪ್ಪಾರೆಡ್ಡಿಯವರು ಶುದ್ಧ ಕುಡಿಯುವ ನೀರಿನ ಘಟಕದ ಲೋಕರ್ಪಣೆಯನ್ನು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಶ್ರೀ ರಾಜು ಎಸ್ ಬಾಳೆಕಾಯಿ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ವಹಿಸಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ.ಎಲ್.ಸುರೇಶ್‌ರಾಜು, ಬ್ಯಾಂಕಿನ ನಿರ್ದೇಶಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಚನ್ನಕೇಶವಪುರ ಕುಡಿಯುವ ನೀರಿನ ಘಟಕದ ಲೋಕಾರ್ಪಣೆ

ಚನ್ನಕೇಶವಪುರ ಬಡಾವಣೆ ಶಾಖಾ ಕಟ್ಟಡದ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ದಿನಾಂಕ : 19–03–2015ರಂದು ಪ್ರಾರಂಭ ಮಾಡಲಾಯಿತು. ಚಿತ್ರದುರ್ಗ ಜಿಲ್ಲಾಧಿಕಾರಿಗಳಾದ ಮಾನ್ಯಶ್ರೀ ಎಂ.ಕೆ.ರಂಗಯ್ಯನವರು ಬ್ಯಾಂಕಿನ ಕುಡಿಯುವ ನೀರಿನ ಘಟಕದ ಲೋಕಾರ್ಪಣೆಯನ್ನು ನೆರವೇರಿಸಿದರು. ಜಯಚಾಮರಾಜೇಂದ್ರ ಬಡಾವಣೆ ಶಾಖಾ ಕಟ್ಟಡದ ಆವರಣದಲ್ಲಿ ಬ್ಯಾಂಕಿನ ಶುದ್ಧ ಕುಡಿಯುವ ನೀರಿನ ಘಟಕವನ್ನು ದಿನಾಂಕ 23–03–2015ನೇ ಸೋಮವಾರದಂದು ಲೋಕಾರ್ಪಣೆ ಮಾಡಲಾಯಿತು.



ಚಿತ್ರದುರ್ಗ ನಗರಸಭಾ ಅಧ್ಯಕ್ಷರಾದ ಶ್ರೀ ಟಿ.ಕಾಂತರಾಜ್‌ರವರು ಶುದ್ಧ ಕುಡಿಯುವ ನೀರಿನ ಘಟಕ ಸಮಾರಂಭವನ್ನು ಉದ್ಘಾಟಿಸುತ್ತಿರುವುದು

## ಜಯಚಾಮರಾಜೇಂದ್ರ ಬಡಾವಣೆ ಶಾಖಾ ಕಟ್ಟಡದ ಆವರಣದಲ್ಲಿ ಕುಡಿಯುವ ನೀರಿನ ಘಟಕ ಉದ್ಘಾಟನೆ



ಜಯಚಾಮರಾಜೇಂದ್ರ ಬಡಾವಣೆ ಶಾಖಾ ಕಟ್ಟಡದ ಆವರಣದ ಶುದ್ಧ ಕುಡಿಯುವ ನೀರಿನ ಘಟಕವನ್ನು ಚಿತ್ರದುರ್ಗ ಲೋಕಸಭಾ ಸದಸ್ಯರಾದ ಶ್ರೀ ಬಿ.ಎನ್.ಚಂದ್ರಪ್ಪ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿದರು.

## ಜೆ.ಸಿ.ಆರ್. ಬಡಾವಣೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಮಾನ್ಯಶ್ರೀ ಗುರುನಾಥ ಜಾಂತಿಕರ್‌ರವರು ಶುದ್ಧ ಕುಡಿಯುವ ನೀರಿನ ಘಟಕವನ್ನು ಲೋಕಾರ್ಪಣೆ ಮಾಡಿದರು.

## ಉದಯ ಪತ್ತಿನ ಸೌಹಾರ್ದ ಸಹಕಾರಿಗೆ ಆಯ್ಕೆ



ಶ್ರೀ ಎಸ್.ಆಸಿಫ್
ಅಧ್ಯಕ್ಷರು



ಬಿ. ಹಯಾಸ್ ಸಾಬ್
ಉಪಾಧ್ಯಕ್ಷರು

ಉದಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿರುತ್ತಾರೆ.

## ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿಗೆ ಆಯ್ಕೆ



ಶ್ರೀ ಬಿ.ಕೆ. ಪ್ರಕಾಶ
ಅಧ್ಯಕ್ಷರು



ಶ್ರೀ ಬಿ.ಎಂ ಮಹೇಶ
ಉಪಾಧ್ಯಕ್ಷರು

ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿರುತ್ತಾರೆ

# ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ – ನಬಾರ್ಡ್

http://vamnicom.gov.in

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಭಾರತದ ಕೃಷಿ ಹಾಗೂ ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ಸ್ವಾತಂತ್ರ್ಯ ನಂತರದಲ್ಲಿ ಸಾಕಷ್ಟು ಪ್ರಯತ್ನಗಳು ನಡೆದಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತ ಬರಲಾಗುತ್ತಿದೆ. ಆದರೆ ಈ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರೀಕೃತ ನಿರೀಕ್ಷಣೆಯನ್ನು ಹೊಂದಿರುವ, ಮಾರ್ಗದರ್ಶನ ಮಾಡುವ ಹಾಗೂ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಲ್ಲಬಲ್ಲ ಸಂಸ್ಥೆಯೊಂದರ ಅಗತ್ಯವನ್ನು ಮನಗಂಡು ಕೇಂದ್ರ ಸರ್ಕಾರ ಸಮಿತಿಯೊಂದನ್ನ 1979ರಲ್ಲಿ ನೇಮಿಸಿತು. ಸಮಿತಿಯ ವರದಿಯ ಆಧಾರದಲ್ಲಿ, ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ – ನಬಾರ್ಡ್‌ನ್ನು 1982ರಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ 100 ಕೋಟಿ ಬಂಡವಾಳವನ್ನು ಕೇಂದ್ರ ಸರ್ಕಾರ ಹಾಗೂ ಆರ್‌ಬಿಐನಿಂದ ಒದಗಿಸುವ ಮೂಲಕ ಆರಂಭಿಸಲಾದ ಈ ಸಂಸ್ಥೆಗೆ ಕೃಷಿ ಪತ್ತಿನ ಚಟುವಟಿಕೆಗಳನ್ನು ನಡೆಸುವುದು ಹಾಗೂ ಗ್ರಾಮೀಣಾಭಿವೃದ್ಧಿಗೆ ಶ್ರಮಿಸಲು ಹಣಕಾಸು ವ್ಯವಸ್ಥೆ ಮಾಡುವ ಕಾರ್ಯವನ್ನು ವಹಿಸಲಾಯಿತು.

ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತ ಬಂದಿರುವುದು ಸಹಕಾರ ಕ್ಷೇತ್ರ. ಆದ್ದರಿಂದ ನಬಾರ್ಡ್ ಸಹಕಾರ ಕ್ಷೇತ್ರದ ಮೂಲಕ ಹಾಗೂ ತನ್ನದೆ ನೇರ ಯೋಜನೆಗಳ ಮೂಲಕ ಗ್ರಾಮೀಣಾಭಿವೃದ್ಧಿಗೆ ಶ್ರಮಿಸುತ್ತಿದೆ. ಭಾರತದ ಸಹಕಾರ ಕ್ಷೇತ್ರದ ಕ್ರೆಡಿಟ್ ವಿನ್ಯಾಸದಲ್ಲಿ ಮೂರು ಹಂತಗಳಿವೆ. ಅವೆಂದರೆ ಅಪೆಕ್ಸ್ ಸಹಕಾರ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಸಹಕಾರ ಸಂಸ್ಥೆಗಳು. ಅಪೆಕ್ಸ್ ಸಹಕಾರ ಬ್ಯಾಂಕುಗಳಿಗೆ ಹಣಕಾಸು ವ್ಯವಸ್ಥೆ ಮಾಡುವ ಮೂಲಕ ನಬಾರ್ಡ್ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗೆ ಸಹಕರಿಸುತ್ತಿದೆ. ಕೆಲವು ಕೃಷಿ ಹಾಗೂ ಅಭಿವೃದ್ಧಿ ಯೋಜನೆಗಳಿಗೆ, ಸಾಂಸ್ಥಿಕ ಅಭಿವೃದ್ಧಿಗೆ ನೇರವಾಗಿ ಹಣಕಾಸು ವ್ಯವಸ್ಥೆಯನ್ನು ಕೂಡ ನಬಾರ್ಡ್ ಒದಗಿಸುತ್ತದೆ. ನಬಾರ್ಡ್ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುವ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 25 : https://www.nabard.org/**

- ನಬಾರ್ಡ್‌ನ ಆರಂಭ, ಸಂಸ್ಥೆಯ ಗುರಿ, ಉದ್ದೇಶ, ಇದುವರೆಗಿನ ಹಣಕಾಸು ವಿವರಗಳು, ವ್ಯವಹಾರ, ಅಭಿವೃದ್ಧಿ ಹಾಗೂ ನಿರೀಕ್ಷಣಾ ಕ್ಷೇತ್ರದಲ್ಲಿ ನಬಾರ್ಡ್ ಕಾರ್ಯಚಟುವಟಿಕೆಯ ಮುಖ್ಯಾಂಶಗಳನ್ನು ಈ ತಾಣದಲ್ಲಿ ನೋಡಬಹುದು.
- ಆಡಳಿತ ಸಮಿತಿಯ ವಿವರಗಳು, ಸಾಂಸ್ಥಿಕ ಸ್ವರೂಪ, ಕಛೇರಿ ಆಡಳಿತ ವಿಭಾಗಗಳ ವಿವರಗಳು, ವಿಭಾಗೀಯ ಕಛೇರಿಗಳು, ತರಬೇತಿ ಕೇಂದ್ರಗಳು, ಉಪ ಕಛೇರಿಗಳ ವಿವರಗಳನ್ನು ಈ ವೆಬ್‌ತಾಣದಿಂದ ಪಡೆಯಬಹುದು.
- ನಬಾರ್ಡ್ ಮುಖ್ಯವಾಗಿ ಹಣಕಾಸು, ಅಭಿವೃದ್ಧಿ ಹಾಗೂ ಮೇಲ್ವಿಚಾರಣಾ ಕಾರ್ಯವನ್ನು ಮಾಡುತ್ತದೆ. ಈ ಕಾರ್ಯಗಳ ವಿವರಗಳು – ಮರು ಹಣಕಾಸು, ನೇರವಾಗಿ ಹಣಕಾಸು, ಸಾಂಸ್ಥಿಕ ಅಭಿವೃದ್ಧಿ, ಕೃಷಿ ವಲಯ




ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿ, ಸಂಶೋಧನೆ, ಕಿರು ಹಣಕಾಸು ವಲಯದಲ್ಲಿ ಹೊಸ ಯೋಜನೆಗಳ ಅಭಿವೃದ್ಧಿ ಇತ್ಯಾದಿಗಳೊಂದಿಗೆ ಮೇಲ್ವಿಚಾರಣೆಯ ಸ್ವರೂಪಗಳ ಮಾಹಿತಿ ಪಡೆಯಬಹುದು.

- ನಬಾರ್ಡ್ ಕಾಯ್ದೆ ಹಾಗೂ ನಿಯಮಗಳು, ವಿವಿಧ ಸುತ್ತೋಲೆಗಳು, ಪ್ರಕಟಣೆಗಳು, ವಾರ್ಷಿಕ ವರದಿಗಳು, ವಿವಿಧ ಕ್ಷೇತ್ರದ ಮಾದರಿ ಯೋಜನೆಗಳು, ಮಾಧ್ಯಮ ಸಮಾಚಾರಗಳು, ವಿವಿಧ ಉಪನ್ಯಾಸ, ಭಾಷಣಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸ್ವ–ಸಹಾಯ ಗುಂಪುಗಳ ರಚನೆ, ನೀರಾವರಿ ಯೋಜನೆಗಳಿಗೆ, ಆಹಾರ ಸಂಸ್ಕರಣ ಘಟಕಗಳಿಗೆ ಸಹಾಯ ಸೇರಿದಂತೆ ನಬಾರ್ಡ್ ನೇತೃತ್ವದಲ್ಲಿ ನಡೆಯುತ್ತಿರುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ, ಸರ್ಕಾರದಿಂದ ಪ್ರಾಯೋಜಿತ ಕೃಷಿ, ಕೃಷಿಯೇತರ, ಉತ್ಪನ್ನ ಆಧಾರಿತ, ಹೂಡಿಕೆಯಾಧಾರಿತ ಯೋಜನೆಗಳ ವಿವರಗಳನ್ನು ಈ ತಾಣದಿಂದ ಪಡೆಯಬಹುದು.

ಗ್ರಾಮೀಣಾಭಿವೃದ್ಧಿಗಾಗಿ ಸಹಕಾರ ಕ್ಷೇತ್ರವನ್ನೂ ಒಳಗೊಂಡು ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಸಂಸ್ಥೆ ನಬಾರ್ಡ್, ಇದರ ಬಗ್ಗೆ ಮಾಹಿತಿಯನ್ನು ಹೊಂದುವ ಮೂಲಕ, ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರುವಲ್ಲಿ ನಬಾರ್ಡ್ ಸಹಕಾರದೊಂದಿಗೆ ಶ್ರಮಿಸುವ ಪ್ರಯತ್ನವನ್ನು ಸೌಹಾರ್ದ ಸಹಕಾರಿಗಳು ಕೂಡ ಮಾಡಬಹುದು.

ಆಯಾ ವಿಭಾಗಗಳ ನಬಾರ್ಡ್ ಅಧಿಕಾರಿಗಳನ್ನು ಸಂಪರ್ಕಿಸುವ ಮೂಲಕ ಸೌಹಾರ್ದ ಸಹಕಾರಿಗಳು ನಬಾರ್ಡ್ ಸಹಕಾರವನ್ನು ಯಾವೆಲ್ಲ ಹಂತದಲ್ಲಿ, ಯೋಜನೆಯಲ್ಲಿ ಪಡೆಯಬಹುದು ಎನ್ನುವ ಬಗ್ಗೆ ಚರ್ಚಿಸಿ ಕಾರ್ಯರೂಪಕ್ಕೆ ತರುವ ಅವಕಾಶಗಳಿವೆ. ಈ ಬಗ್ಗೆ ನಬಾರ್ಡ್ ವೆಬ್‌ತಾಣದಿಂದ ಅಗತ್ಯ ಮಾಹಿತಿಯನ್ನು ಸಹಕಾರಿಗಳು ಪಡೆಯಬಹುದಾಗಿದೆ. ■

# ಸುಭದ್ರವಾದ ಸಂಸ್ಥೆಗಳನ್ನು ನಿರ್ಮಿಸುವ ಮೂಲಸೂತ್ರಗಳು



▸▸ ಡಾ|| ನಂದೀಶ ವಿ. ಹಿರೇಮಠ, ಪ್ರೊ. ಕಾರ್ಪೋರೇಟ್ ಟ್ರೇನರ್, ಕನಸಲ್ಟಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

**1.1) ಸಂಸ್ಥೆಗಳು ಪ್ರಗತಿಗೆ ನಾಂದಿ :**

ಸಂಸ್ಥೆಗಳು ಅಂದರೆ ಅದರಲ್ಲಿ ಜನರು, (People) ಒಂದು ವ್ಯವಸ್ಥೆ (Structure) ಮೂಲಕ ಒಂದು ಅಥವಾ ಹಲವು ಉದ್ದೇಶಗಳನ್ನು (goals/purpose) ಸಾದಿಸಲು ಒಂದುಗೂಡಿ ಕೆಲಸ ಮಾಡುವ ವ್ಯವಸ್ಥೆ (System) ಎಂದು ಹೇಳಬಹುದು.

ಸಾಮಾನ್ಯವಾಗಿ, ಸಂಸ್ಥೆಗಳನ್ನು ವಿವಿಧ ಗುಂಪುಗಳನ್ನಾಗಿ ವಿಂಗಡಿಸಬಹುದು.ಬಹುಮುಖ್ಯವಾಗಿ 4 ವಿಧವಾದ ಸಂಸ್ಥೆಗಳನ್ನು ಕಾಣಬಹುದು.

1) ಸರಕಾರಿ ಸಂಸ್ಥೆಗಳು (Govt Institutions)
2) ಖಾಸಗಿ ಸಂಸ್ಥೆಗಳು (Private Organisations)
3) ಸಹಕಾರಿ ಸಂಸ್ಥೆಗಳು (Cooperative Organisations)
4) ಸೇವಾಕಾರಿ ಸಂಸ್ಥೆಗಳು (Voluntary Institutions/NGOs)

ರೀತಿಗಳು ಹಲವು ಬಗೆಯದಾದರೂ, ಸುಭದ್ರ ಸಂಸ್ಥೆ ನೀರ್ಮಿಸುವ ಮೂಲಸೂತ್ರಗಳು ಒಂದೇ ರೀತಿಯಾಗಿವೆ.

**1.2) ಸಂಸ್ಥೆಗಳು ಮೂರು ಮುಖ್ಯ ಅಂಗಗಳು :**

ಪ್ರತಿ ಸಂಸ್ಥೆಯಲ್ಲಿ ಮುಖ್ಯವಾಗಿ ಮೂರು ತರಹದ ಮುಖ್ಯ ಅವಿಭಾಜ್ಯ ಅಂಗಗಳಿರುತ್ತವೆ.

1) ಮಾನವ ಸಂಪನ್ಮೂಲ ಅಭಿವೃದ್ಧಿ. (Human Resource Management) HRM
2) ಗ್ರಾಹಕರ ಸಂಬಂಧ ನಿರ್ವಹಣೆ. (Customers Relations Management CRM)
3) ವ್ಯಾಪಾರ ವೃದ್ಧಿ ಕಾರ್ಯಗಳು. (Business Development Practices, BDP)

ನಾವುಸಂಸ್ಥೆಯನ್ನು ಮಾನವನ ದೇಹಕ್ಕೆ ಹೋಲಿಸಿದರೆ ಮಾನವ ಸಂಪನ್ಮೂಲ, ಬುದ್ಧಿಗೆ ಸಮಾನವದರೆ, ಗ್ರಾಹಕರು/ ಹೃದಯವಿದ್ದಂತೆ. ಆದಾಗ್ಯು ದೇಹದ ಪ್ರತಿ ಅಂಗಗಳು ವ್ಯಾಪಾರ ವಿವಿಧ ಸ್ಥರಗಳಿಗೆ ಹೊಂದಾಣಿಕೆಯಿಂದ ಕಾರ್ಯನಿರ್ವಸಬೇಕಾಗುತ್ತದೆ.

**1.2 (ಅ) ಮಾನವ ಸಂಪನ್ಮೂಲ ಅಭಿವೃದ್ಧಿ :** ಎಚ್ ಆರ್ ಎಮ್ ಆಂತರಿಕ ಆಸ್ತಿ ಅನ್ನಬಹುದು, ಏಕೆಂದರೆ ಇವರಿಲ್ಲದೆ ಸಂಸ್ಥೆ ಅಸ್ತಿತ್ವಕ್ಕೆ ಬರಲು ಸಾದ್ಯವಿಲ್ಲ.

ನಾಯಕರು (Leaders) ಸಂಸ್ಥೆಯನ್ನು ಸುಗಮವಾಗಿ ಸಾಗಿಸಲು ಬೇಕಾದ ಪಾಲಿಸಿಗಳನ್ನು ನೀತಿನಿಯಮಗಳನ್ನು ಹಾಗೂ ಕಾರ್ಯವಿಧಾನಗಳನ್ನು ನಿಯೋಜಿಸುತ್ತಾರೆ.ಅವುಗಳ ಮೂಲಕ ವಿಜಿನ್, ಮಿಶೆನ್ ಹಾಕಿ ಮುನ್ನಡೆಯಲು ದಾರಿ ಮಾಡಿ ಕೊಡುತ್ತಾರೆ. ನಿರ್ವಾಹಕರು / (Managers) ಅಧಿಕಾರಿಗಳು, ನಾಯಕರ ಯೋಜನೆಯಂತೆ ಸೂಕ್ತವಾದ ಯೋಜನೆಗಳನ್ನು ಕಾರ್ಯರೂಪಕ್ಕೆ ಜಾರಿ ಮಾಡಲು ಅನುಕೂಲವಾಗುವ ರೀತಿಯಲ್ಲಿ ಯೋಜಿಸುತ್ತಾರೆ.

ಈ ಎಲ್ಲ ಕಾರ್ಯತಂತ್ರಗಳನ್ನು (Operational plans) ಕಾರ್ಯರೂಪಕ್ಕೆ ತರುವಲ್ಲಿ ಸಿಬ್ಬಂದಿಗಳ (staff/employees) ಪಾತ್ರ ಬಹುಮುಖ್ಯ. ಒಟ್ಟಿನಲ್ಲಿ ಇವರೆಲ್ಲಾ "ಒಂದೇ ತಂಡವಾಗಿ ವಿಚಾರ ಮತ್ತು ಆಚಾರಗಳನ್ನು ಕಾರ್ಯರೂಪಗೊಳಿಸುವಲ್ಲಿ ಒಟ್ಟಾಗಿ ಕೆಲಸ ಮಾಡಿದಾಗ ಸಂಸ್ಥೆಯ ಧ್ಯೇಯ-ಉದ್ದೇಶಗಳು ಸಾರ್ಥಕಗೊಳ್ಳಲು ಸಹಾಯವಾಗಿ ಪ್ರಗತಿ ತನ್ನಿಂದ ತಾನಾಗಿ ಬರುತ್ತದೆ.

**1.2(ಬ) ಗ್ರಾಹಕ ಸಂಬಂಧ ನಿರ್ವಹಣೆ :** ಪ್ರತಿಯೊಂದು ಸಂಸ್ಥೆಯ (Products) ಅಥವಾ ಸೇವೆಗಳನ್ನು Services) ನೀಡುವ ಉದ್ದೇಶ ಹೊಂದಿದಾಗ, ಬಹುಮುಖ್ಯವಾಗಿ ಗ್ರಾಹಕರ ಅಗತ್ಯ ಬಹುಮುಖ್ಯ.ದೇಹದಲ್ಲಿ ಹೃದಯ ಬಡಿತ ನಿಂತರೆ ಏನಾಗುತ್ತದೆ ಎಂದು ವಿಚಾರಿಸಿದೆ, ಗ್ರಾಹಕರ ಜೊತೆಗೆ ಹಣ ಹೂಡಿಕೆದಾರರ, ಆಡಳಿತಗಾರರ, ಸರಕಾರ ಹಾಗೂ ಮಾರುಕಟ್ಟೆಯ ಪಾತ್ರಗಳೂ ಮುಖ್ಯಪಾತ್ರ ವಹಿಸುತ್ತವೆ.

**1.2(ಕ) ವ್ಯಾಪಾರ ವೃದ್ಧಿ ಕಾರ್ಯಗಳು :** ವ್ಯಾಪಾರ (Business) ಎಂದ ತಕ್ಷಣ ನಮಗೆಲ್ಲಾ ಗೊತ್ತು. ಬಂಡವಾಳ (Capital) ಬೇಕು ಹಾಗೆಯೇ ಅದನ್ನು ವಹಿಸಿಕೊಳ್ಳುವ ಜಾಣ್ಮೆಯಂತೂ ಬೇಕೆಬೇಕು. ಅಂದರೆ ವಿವಿಧ ರೀತಿಯ ಬಂಡವಾಳಗಳಲ್ಲಿ ಷೇರು ಬಂಡವಾಳ, ಠೇವಣಿ, ಮತ್ತು ಸಾಲಗಳು/ ಸಹಾಯಧನ/ ಮುಖ್ಯವಾಗುತ್ತದೆ. ಅದೇ ರೀತಿ, ಬಂಡವಾಳ ದುಡಿಸಿಕೊಳ್ಳುವಲ್ಲಿ ಸಾಲಗಳನ್ನು ನೀಡುವುದು, ಹಣಹೂಡಿಕೆ ಮಾಡುವುದು ಮತ್ತು ಹಣವಿಲ್ಲದೇ ಸೇವೆಗಳ ವ್ಯಾಪಾರ ವಹಿವಾಟು ಮಾಡುವುದು ಮುಖ್ಯವಾಗುತ್ತದೆ.

**1.3) ಸಂಸ್ಥೆಗಳ ಸಮಗ್ರ ಅಭಿವೃದ್ಧಿಗೆ ಗಮನಕೊಡಬೇಕಾದ ಅತಿ ಮುಖ್ಯ ಸಪ್ತಸೂತ್ರಗಳು :**

ಇಲ್ಲಿವರೆಗೆ ನಾವೆಲ್ಲ ತಿಳಿದುಕೊಂಡ ವಿಷಯಗಳನ್ನು ಕ್ರೋಡಿಕರಿಸಿ.ಈ ಕೆಳಗಿನ ಅತಿಮುಖ್ಯ ಅಂಶಗಳಲ್ಲಿ ಹಿಡಿದಿಡ ಬಹುದು.

1) ಸಂಸ್ಥೆಯ ದೂರದೃಷ್ಟಿ ಹಾಗೂ ಧ್ಯೆಯ ಸ್ಪಷ್ಟವಾಗಿರಬೇಕು. (Vision, Mission & Values)
2) ನಿರ್ದಿಷ್ಟವಾದ ಧ್ಯೆಯ ಹಾಗೂ ಉದ್ದೇಶಗಳು ಸಾಧನೆಯನ್ನು ಸುಲಭಗೊಳಿಸುತ್ತದೆ. (Goals & objects)

3) ನಿಖರವಾದ ಯೋಜನೆಗಳಿಂದ (Plans) ಕಾರ್ಯ ಮಾಡುವುದು ಬಹಳ ಸರಳ.
4) ಎಲ್ಲ ಕೆಲಸಗಳನ್ನು ವ್ಯವಸ್ಥೆ ಮತ್ತು ರೂಪರೇಷೆ (Systems & Proceedures)ಗಳ ಮೂಲಕ ಮಾಡಬೇಕು.
5) ಎಲ್ಲ ದಿಕ್ಕಿನಿಂದ ಮುಖ್ಯವಾಗಿ ಕಾರ್ಯ ಪ್ರವೃತ್ತರಾಗುವುದು (implementations of plans) ಬಹುಮುಖ್ಯ.
6) ಕಾರ್ಯೋನ್ಮಕರಾದ ನಂತರ, ವಿಮರ್ಶೆ ಹಾಗೂ ಪರಿಶಿಲನೆ (Review & Monitoring) ಅತೀಮುಖ್ಯ. ಪಾತ್ರವಹಿಸುತ್ತವೆ, ಏಕೆಂದರೆ ಅವು ನಮ್ಮ ಪ್ರಗತಿಯನ್ನು ತಿಳೀಸುವ ಕೈಕನ್ನಡಿಗಳಿದ್ದಂತೆ.
7) ನಮ್ಮ ಯೋಜನೆ – (Plans) ಯೋಜನೆ ಪ್ರಕಾರ ಪ್ರಗತಿ ಕಂಡುಬಂದರೆ ಸಂತೋಷದಿಂದ ಹೆಮ್ಮೆಯಿಂದ ಮುನ್ನಡೆ ಯೋಣ, ಇಲ್ಲವಾದರೆ ನಾವು ಮಾಡಿದ ತಪ್ಪುಗಳಿಂದ ಪಾಠಕಲಿತು ನಾವು ಮಾಡುವ ಕಾರ್ಯಗಳಲ್ಲಿ ನವೀನತೆ ಅಳವಡಿಸಿಕೊಂಡು ಗುಣಮಟ್ಟವನ್ನು (Quality) ಹೆಚ್ಚಿಸುವಲ್ಲಿ ಹೆಜ್ಜೆ ಇಟ್ಟರೆ ಭವ್ಯ ಭವಿಷ್ಯ ನಮ್ಮದಾಗುತ್ತದೆ. ಸಂಸ್ಥೆಗಳು ಅಬಿವೃದ್ಧಿ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗುತ್ತದೆ.

ಸಹಕಾರಿಗಳಾಗಿರುವ ನಾವೆಲ್ಲರು ಸಂಸ್ಥೆಗಳನ್ನು ಹುಟ್ಟುಹಾಕುವಾಗ, ಬೆಳೆಸುವಾಗ ಹಾಗೂ ವಿವಿಧ ಉದ್ದೇಶಗಳಾಗಿ ಅಭಿವೃದ್ಧಿಗೊಳಿಸುವಾಗ ದೂರದೃಷ್ಟಿಯಿಂದ ಕಾರ್ಯಪ್ರವೃತ್ತರಾಗುವದನ್ನು ಮರೆಯುವದು ಬೇಡ.

## ಯುಗಾದಿ ಸಂಭ್ರಮ – 2015

ಸದಸ್ಯರಿಗೆ, ಗ್ರಾಹಕರಿಗೆ ಸಹಕಾರಿಯವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ 'ಯುಗಾದಿ ಸಂಭ್ರಮ–2015' ಕಾರ್ಯಕ್ರಮದಲ್ಲಿ 'ಪ್ರತಿಭಾ ಆರ್ಕೆಸ್ಟ್ರಾ, ಬಳ್ಳಾರಿ ಅವರಿಂದ 'ಸಂಗೀತ ಕಾರ್ಯಕ್ರಮ' ಮತ್ತು ನಾಟ್ಯ ಭಾರತಿ ನೃತ್ಯ ಕಲಾ ಶಾಲೆ, ಬಳ್ಳಾರಿ ಅವರಿಂದ 'ನೃತ್ಯ ಪ್ರದರ್ಶನ' ವನ್ನು ದಿನಾಂಕ : 21.03.2015ರಂದು ಸಂಜೆ : 6.30 ಗಂಟೆಗೆ ಆಯೋಜಿಸಲಾಗಿತ್ತು. ಗಚ್ಚಿನಮಠ, ಮಸ್ಕಿಯ ಶ್ರೀ ರುದ್ರಮುನಿ ದೇವರು ಉದ್ಘಾಟಿಸಿದರೆ, ಮಸ್ಕಿ ವಿಧಾನ ಸಭಾ ಕ್ಷೇತ್ರ ಶಾಸಕ ಶ್ರೀ ಪ್ರತಾಪಗೌಡ ಪಾಟೀಲರು ಅತಿಥಿಯಾಗಿದ್ದರು.



ಬ್ಯಾಂಕಿನ ಅಧ್ಯಕ್ಷ ಡಾ.ಶಿವಶರಣಪ್ಪ ಇತ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಶರಣಪ್ಪ ಹುಲ್ಲೂರು, ಮುಖ್ಯಕಾರ್ಯ ನಿರ್ವಾಹಕ ಶ್ರೀ ವೀರೇಶ ಹಿರೇಮಠ ಅವರು ಉಪಸ್ಥಿತರಿದ್ದರು.

## ಭ್ರಮರಾಂಬ ಸೌಹಾರ್ದ ಸಹಕಾರಿ ಮಸ್ಕಿ ರೂ.1.65 ಲಕ್ಷ ಲಾಭ

- **ಶೇರು ಬಂಡವಾಳ :** ಆರ್ಥಿಕ ವರ್ಷ(2014–15)ದ ಅಂತ್ಯಕ್ಕೆ ಸಹಕಾರಿಯು ರೂ. 1 ಕೋಟಿ 84 ಲಕ್ಷದಷ್ಟು ಶೇರು ಬಂಡವಾಳ
- **ಠೇವಣಿಗಳು :** ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯು ರೂ. 92 ಕೋಟಿ 28 ಲಕ್ಷದಷ್ಟು ಠೇವಣಿ ಸಂಗ್ರಹಿಸಿದೆ.
- **ಸಾಲ & ಮುಂಗಡಗಳು :** ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯು 6715 ಜನರಿಗೆ ರೂ. 68 ಕೋಟಿ 22 ಲಕ್ಷದಷ್ಟು, ವಿವಿಧ ರೀತಿಯ ಸಾಲವನ್ನು ವಿತರಿಸಿದೆ.
- **ಕಾಯ್ದಿಟ್ಟ ನಿಧಿಗಳು :** ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯು ರೂ. 6 ಕೋಟಿ 03 ಲಕ್ಷದಷ್ಟು ವಿವಿಧ ರೀತಿಯ ನಿಧಿಗಳನ್ನು ಹೊಂದಿದೆ.
- ಬೇರೆ ಬ್ಯಾಂಕ್‌ಗಳಲ್ಲಿ ಠೇವುಗಳು ಆರ್ಥಿಕ ವರ್ಷದ ಅಂತ್ಯಕ್ಕೆ ರೂ. 28 ಕೋಟಿ ಠೇವುಗಳನ್ನು ಹೊಂದಿರುತ್ತದೆ.
- **ಒಟ್ಟು ವ್ಯವಹಾರ :** ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯ ಒಟ್ಟು ವ್ಯವಹಾರವು ರೂ.160 ಕೋಟಿ ಇರುತ್ತದೆ.
- **ದುಡಿಯುವ ಬಂಡವಾಳ :** ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯ ದುಡಿಯುವ ಬಂಡವಾಳವು ರೂ.100 ಕೋಟಿ ಇರುತ್ತದೆ. ಸಹಕಾರಿಯು 2014–15 ನೇ ಸಾಲಿಗೆ ರೂ. 1 ಕೋಟಿ 65 ಲಕ್ಷ ನಿವ್ವಳ ಖಾಭ ಗಳಿಸಿರುತ್ತದೆ. – ಲಾಭಾಂಶ ಸಹಕಾರಿಯು ಸದಸ್ಯರಿಗೆ ಪ್ರತಿ ವರ್ಷ ಶೇ.16 ರಷ್ಟು ಲಾಭಾಂಶ ವಿತರಿಸುತ್ತಾ ಬಂದಿದೆ.

# ಸಹಕಾರ ಸಂಸ್ಥೆಗಳಿಗೆ ನೇರ ತೆರಿಗೆ ಅಭಿವೃದ್ಧಿಗೆ ಮಾರಕ 'ನೇರ ತೆರಿಗೆ ಸಂಹಿತೆ'



▸▸ ಶ್ರೀಮತಿ ಮಂಜುಳಾ ಪಾಟೀಲ್

ನಮ್ಮ ದೇಶದ ಸಹಕಾರಿ ಕ್ಷೇತ್ರಕ್ಕೆ 110 ವರುಷಗಳ ಇತಿಹಾಸವಿದೆ. ದೇಶದ ಮೊಟ್ಟಮೊದಲ ಸಹಕಾರ ಸಂಘ ನಮ್ಮ ರಾಜ್ಯದ ಗದಗ ತಾಲೂಕಿನ ಕಣಗಿನಹಾಳದಲ್ಲಿ ಪ್ರಾರಂಭವಾಗಿದ್ದು, ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಬ್ರಿಟೀಷರ ಕಾಲದ ಚಳುವಳಿಗೆ ಸಹಕಾರಿ ಸಂಸ್ಥೆ ಹುಟ್ಟು ಹಾಕಿ, ಗ್ರಾಮಾಂತರ ಪ್ರದೇಶದ ಜನರಿಗೆ ಸಹಾಯಹಸ್ತ ನೀಡಿದ ಹೆಗ್ಗಳಿಕೆ ನಮ್ಮ ಕರ್ನಾಟಕಕ್ಕೆ ಸೇರುತ್ತದೆ.

ನಮ್ಮ ದೇಶ ಹಳ್ಳಿಗಳ ನಾಡು. ಹಳ್ಳಿಗಳ ಬೆಳವಣಿಗೆಯಿಂದಲೆ, ನಮ್ಮ ದೇಶ 'ರಾಮರಾಜ್ಯ' ಆಗಲು ಸಾಧ್ಯ ಎಂದು ಗಾಂಧೀಜಿ ಸಾರಿದರು. ಅವರ ಕನಸನ್ನು ಸ್ವಾತಂತ್ರ್ಯ ಬಂದು 67 ವರುಷ ಕಳೆದರೂ, ನಮ್ಮಿಂದ ನನಸು ಮಾಡಲು ಆಗಿಲ್ಲ. ಇಂಥ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರವು ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಕಷ್ಟ ಸುಖಗಳಲ್ಲಿ ಸ್ಪಂದಿಸುವ ಒಂದು ಒಳ್ಳೆ ಕ್ಷೇತ್ರ. ಈ ಕ್ಷೇತ್ರದಿಂದ ಆರ್ಥಿಕ ಅಭಿವೃದ್ಧಿಯಲ್ಲದೇ, ಹಸಿರು ಕ್ರಾಂತಿ, ಕ್ಷೀರಕ್ರಾಂತಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ. ಇದೆಲ್ಲವನ್ನು ಗಮನಿಸಿ 2012ನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಘೋಷಿಸಿರುವುದು, ಸಹಕಾರಿಗಳೆಲ್ಲರಿಗೂ ಕಿರೀಟ ಇಟ್ಟಂತಾಗಿದೆ.



ಕೇಂದ್ರ ಸರ್ಕಾರದ "ನೇರ ತೆರಿಗೆ ಸಂಹಿತೆ" ವಿಚಾರ ಸಹಕಾರಿಗಳಲ್ಲಿ ಚಿಂತೆಯನ್ನು ಮೂಡಿಸಿದೆ ಎಂಬ ವಿಷಯ ವಿಷಾದಕರವಾದದ್ದು. ಏಕೆಂದರೆ, ನಮ್ಮ ಸಹಕಾರಿಗಳಿಗೆ ಕೇಂದ್ರ ಬಿಂದು ಹಳ್ಳಿಗಳ ರೈತ ಜನ. ಈ ಜನ ಎಷ್ಟೋ ಕಷ್ಟ ಪಟ್ಟು ದುಡಿದು, ಹಣವನ್ನು ಸಂಗ್ರಹಿಸಿ, ಷೇರು ಹಾಕಿ ಮತ್ತು ಉಳಿತಾಯ ಮಾಡಿ, ಸಹಕಾರಿ ಸಂಸ್ಥೆಗಳ ಹುಟ್ಟಿಗೆ ಕಾರಣರಾಗಿರುತ್ತಾರೆ. ಇದು ಶ್ರೀಮಂತರ ಬಡ್ಡಿ ವ್ಯವಹಾರಕ್ಕೆ ಕಡಿವಾಣ ಹಾಕಲು ನಾಂದಿಯಾಗುತ್ತದೆ. ಇಂಥ ಸಂಸ್ಥೆಗಳಿಗೆ 33% ತೆರಿಗೆ ವಿಧಿಸಿದರೆ, ಸರಕಾರವೇ ಜನರನ್ನು ಶೋಷಿಸಿದಂತಾಗುತ್ತದೆ, ಇದರಿಂದ ಸ್ವಾಯತ್ತತೆಯನ್ನು ಕಸಿದುಕೊಂಡದ್ದಲ್ಲದೇ, ಜನರನ್ನು ಸ್ವಾಭಿಮಾನಿ ಬದುಕಿನಿಂದ ದೂರಸರಿಸಿದಂತಾಗುತ್ತದೆ.

ಆದ್ದರಿಂದ, ಈ ತೆರಿಗೆಯ ಬದಲಾಗಿ, ಸಾರ್ವಜನಿಕ ನಿಧಿ ಎಂದು ಸಹಕಾರಿಗಳಲ್ಲಿ ಮಾಡಿ ಆ ಹಣದಿಂದ ಆ ಸಹಕಾರಿಯ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕ ಕೆಲಸ ಮಾಡುವುದರಿಂದ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಅರ್ಥ ಸಾರ್ಥಕ ಮಾಡಿದಂತಾಗುತ್ತದೆ. ತೆರಿಗೆ ಪಡೆದು ಸರಕಾರ ಮಾಡುವುದು ಇದೇ ಸಾರ್ವಜನಿಕ ಕೆಲಸ ಅಲ್ಲವೇ? ಅದರ ಬದಲು ಅವರ ಸಾರ್ವಜನಿಕ ಕೆಲಸಗಳನ್ನು ಅವರಿಗೆ ಮಾಡಲು ಬಿಟ್ಟರೆ, ತಮ್ಮ ಕ್ಷೇತ್ರದ ಅಭಿಮಾನದಿಂದ ಸರಕಾರ ಮಾಡುವ ಕೆಲಸಕ್ಕಿಂತ ಒಳ್ಳೇ ಗುಣಮಟ್ಟದ ಕೆಲಸಗಳಾಗುತ್ತವೆ. ಹಣ ಸೋರಿ ಹೋಗುವುದು ನಿಲ್ಲುತ್ತದೆ. ಭ್ರಷ್ಟಾಚಾರ ತಡೆಗಟ್ಟಿದಂತಾಗುತ್ತದೆ. ಏಕೆಂದರೆ, ಅಲ್ಲಿ ಸಂಸ್ಥೆಯ ಗೌರವ ಮುಖ್ಯವಾಗಿರುತ್ತದೆ. ಕೆಳಮಟ್ಟದ ಕೆಲಸ ಮಾಡಿದರೆ ಸಹಕಾರಿ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ ಎಂಬ ಅಳುಕು ಅವರಲ್ಲಿ ಕಾಡುತ್ತಿರುತ್ತದೆ. ಆದ್ದರಿಂದ, ಸಾರ್ವಜನಿಕ ನಿಧಿಯಿಂದ ಮಾಡಿದ ಕೆಲಸ ಒಳ್ಳೇ ಗುಣಮಟ್ಟದ್ದಾಗಿರುತ್ತದೆ. ಇದೇ ವ್ಯವಸ್ಥೆ ಮುಂದುವರಿದರೆ ನಮ್ಮ ದೇಶ "ರಾಮರಾಜ್ಯ" ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಸಾರ್ವಜನಿಕ ವಿಷಯಕ್ಕೆ ಸಂಬಂಧಿಸಿದ್ದು.

ಸ್ತ್ರೀಯರ ವಿಷಯಕ್ಕೆ ಬಂದಾಗ "ಸ್ತ್ರೀ ಶಕ್ತಿ" ಗುಂಪುಗಳನ್ನು ಮಾಡಿ, ಕಡಿಮೆ ದರದಲ್ಲಿ ಬಡ್ಡಿ, ಸಾಲದಲ್ಲಿ ವಿನಾಯಿತಿಯನ್ನು ಘೋಷಿಸಿ, ಅಬಲೆ ಮಹಿಳೆಯರನ್ನು ಸಬಲೆಯರನ್ನಾಗಿ ಮಾಡುತ್ತೇವೆ ಎಂದು ಸರಕಾರ ಹೆಮ್ಮೆಯಿಂದ ಪ್ರಚಾರ ಗಿಟ್ಟಿಸಿಕೊಳ್ಳುತ್ತದೆ. ಆದರೆ, ಅದೇ ಮಹಿಳೆ ಒಂದು ಹೆಜ್ಜೆ ಮುಂದೆ ಇಟ್ಟು, ಸ್ವಾಭಿಮಾನದ ಬದುಕಿಗಾಗಿ ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಿ, ತಮ್ಮ ವ್ಯವಹಾರಗಳನ್ನು ತಾವೇ ನಡೆಸಿಕೊಂಡು ಹೋದರೆ, ಅದೇ ಸರಕಾರವು ಸಹಕಾರಿಗಳಿಗೆ ಸಾಲವೂ ನೀಡದೆ, ಜೊತೆಗೆ ತೆರಿಗೆ ಹೇರುತ್ತೇವೆ ಎನ್ನುವುದು ಯಾವ ನ್ಯಾಯ?

"ಸ್ತ್ರೀ ಶಕ್ತಿ" ಗುಂಪು ಮಾಡಿದವರು ಮಾತ್ರ ಮಹಿಳೆಯರೆ? ಸಹಕಾರಿ ಸಂಸ್ಥೆಗಳಲ್ಲಿ ಇದ್ದವರು ಮಹಿಳೆಯರಲ್ಲವೇ? ಇದನ್ನು ನಮ್ಮ ಸರಕಾರಕ್ಕೆ ಮನದಟ್ಟು ಮಾಡುವುದು ಹೇಗೆ? ಎಲ್ಲಾ ರಾಜಕೀಯ ಪಕ್ಷಗಳು "ಸ್ತ್ರೀ ಶಕ್ತಿ" ಗುಂಪಿನ ನೆಪದಲ್ಲಿ ಮಹಿಳೆಯರನ್ನು ತಮ್ಮ ಆಧೀನದಲ್ಲಿ ಇರಲು ಬಯಸುವವರೇ ಯಾವ ಸರಕಾರವೂ ಸಾರ್ವಜನಿಕರನ್ನು ಸ್ವಾಭಿಮಾನಿಗಳನ್ನಾಗಿ ಮಾಡಲು ಬಯಸುವುದಿಲ್ಲ. ಸಹಕಾರಿ ಸಂಸ್ಥೆಗಳಲ್ಲೂ ಸದಸ್ಯರಿದ್ದ ಮಹಿಳೆಯರೆಲ್ಲ ಶ್ರೀಮಂತರಲ್ಲ. ಅಲ್ಲಿಯೂ 75% ಬಡ ಮಹಿಳೆಯರಿದ್ದಾರೆ. ಸಹಕಾರಿ ಸಂಸ್ಥೆಗಳಿಂದ ಎಷ್ಟೋ ಜನ ಮಯಹಿಳೆಯರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ, ಮದುವೆಗೆ, ಅನಾರೋಗ್ಯವಾದಾಗ ಮತ್ತು ಸ್ವಂತ ವ್ಯವಹಾರಕ್ಕೆ ಅನುಕೂಲ ಮಾಡಿಕೊಂಡಿದ್ದಾರೆ.

ಸರಕಾರ ಮಾಡುವ ಕೆಲಸದಲ್ಲಿ 50% ಕೆಲಸಗಳನ್ನು ಸಹಕಾರಿ ಕ್ಷೇತ್ರವೇ

ದೇಶಕ್ಕೆ ಮಾಡಿಕೊಟ್ಟಿದೆ. ಸಹಕಾರಿ ಸಂಸ್ಥೆಗಳು ಹುಟ್ಟುವುದರಿಂದ ಎಷ್ಟೋ ಜನರಿಗೆ ಉದ್ಯೋಗ ಸಿಗುತ್ತದೆ. ಅಲ್ಲದೇ, ಸಹಕಾರಿ ಸಂಸ್ಥೆಗಳಿಂದ ಅದರಲ್ಲಿದ್ದ ಸದಸ್ಯರೆಲ್ಲರೂ ಒಂದೇ ಎಂಬ ಭಾವ ಮೂಡುತ್ತದೆ. ಕಲಹಗಳು ತಪ್ಪುತ್ತವೆ. ಪ್ರೀತಿಯ ಬದುಕು ಮತ್ತು ಸಂಸ್ಕಾರ ಬರುತ್ತದೆ. ಈ ಸವಲತ್ತುಗಳನ್ನು ಯಾವ ಸರಕಾರವೂ ಸಾಲಗಳ ವಿನಾಯಿತಿ ಮತ್ತು ಕಡಿಮೆ ಬಡ್ಡಿ ಮಾಡುವುದರಿಂದ ಸಿಗುವುದಿಲ್ಲ. ಅದರಿಂದ ಜನರು ಸೋಮಾರಿಗಳಾಗುತ್ತಾರೆ. ಆದ್ದರಿಂದ, ಸರಕಾರವು ತೆರಿಗೆ ವಿಧಿಸದೆ, ಸಣ್ಣ ಸಣ್ಣ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡುವುದಲ್ಲದೇ, ಹೊಸ ಹೊಸ ಸಂಸ್ಥೆಗಳ ಹುಟ್ಟಿಗೆ ಅನುವು ಮಾಡಿಕೊಡಬೇಕು.

ಒಂದು ವೇಳೆ ಈ ತೆರಿಗೆ ಜಾರಿಗೆ ಬಂದದ್ದೇ ಆದರೆ ಹಳ್ಳಿಗಳಲ್ಲಿ ಇದ್ದ ಸಣ್ಣ ಸಣ್ಣ ಸಹಕಾರಿಗಳು ಮುಚ್ಚುತ್ತವೆ. ಹೊಸ ಸಂಸ್ಥೆಗಳು ಹುಟ್ಟುವುದು ಕಡಿಮೆಯಾಗುತ್ತದೆ. ಇದರಿಂದ ಬಂಡವಾಳಷಾಹಿ ಧೋರಣೆ ಇನ್ನು ಹೆಚ್ಚುತ್ತಾ ಹೋಗುತ್ತದೆ.

ಆಗ ಸರಕಾರ ಹೇಳುವ ಸಮಾನತೆ ಎಲ್ಲಿ? “ರಾಮರಾಜ್ಯ”ದ ಕನಸು ಎಲ್ಲಿ. ಸಹಕಾರಿ ಕ್ಷೇತ್ರದಲ್ಲಿ ಕುಸಿತ ಪ್ರಾರಂಭವಾದರೆ, ದೇಶದ ಪ್ರಗತಿ ಕ್ಷೀಣಿಸುತ್ತಾ ಹೋಗುತ್ತದೆ. ಆದ್ದರಿಂದ ಸರಕಾರವು ಈ ತೆರಿಗೆ ಬಗ್ಗೆ ಚಿಂತನೆ ನಡೆಸಿ, ತೆರಿಗೆ ಜಾರಿಗೆ ಬರದಂತೆ ನೋಡಿಕೊಳ್ಳಬೇಕು. ಇದರಿಂದ ದೇಶದ ಅಭಿವೃದ್ಧಿ ಮತ್ತು ಜನ ಸಾಮಾನ್ಯರ ಏಳ್ಗೆಯಾಗುತ್ತದೆ. ■

## 31.03.2014-15ಕ್ಕೆ ವಿವಿಧ ಸಹಕಾರಿ ಸಂಸ್ಥೆಗಳ ಆರ್ಥಿಕ ವಿವರಗಳು

### ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ್

| | |
|---|---|
| ಶೇರು ಬಂಡವಾಳ | 115600.00 |
| ಠೇವಣಿಗಳು | 2836906.25 |
| ಸಾಲ & ಮುಂಗಡಗಳು | 22878684.00 |
| ಕಾಯ್ದಿಟ್ಟ ನಿಧಿಗಳು | 2263251.76 |
| ಒಟ್ಟು ವ್ಯವಹಾರ | 33134288.10 |
| ದುಡಿಯುವ ಬಂಡವಾಳ | 31781558.01 |

### ಸುಖೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಬಳ್ಳಾರಿ

| | |
|---|---|
| ಶೇರು ಬಂಡವಾಳ | 679.19 ಲಕ್ಷಗಳು |
| ಕೊಡಬೇಕಾದ ಬಡ್ಡಿ | 917.22 ಟಚಿಇಘ್ಘ |
| ಕಾಯ್ದಿಟ್ಟ ನಿಧಿಗಳು | 1703.55 ಲಕ್ಷಗಳು |
| ಒಟ್ಟು ವ್ಯವಹಾರ | 43163.03 ಲಕ್ಷಗಳು |
| ದುಡಿಯುವ ಬಂಡವಾಳ | 28026.75ಲಕ್ಷಗಳು |

### ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ. ಬಳ್ಳಾರಿ

| | |
|---|---|
| ಶೇರು ಬಂಡವಾಳ | 37505000 |
| ಠೇವಣಿಗಳು | 1351749234 |
| ಸಾಲ & ಮುಂಗಡಗಳು | 919778341 |
| ಕಾಯ್ದಿಟ್ಟ ನಿಧಿಗಳು | 143826888 |
| ಒಟ್ಟು ವ್ಯವಹಾರ | 2271527575 |
| ದುಡಿಯುವ ಬಂಡವಾಳ | 1533081122 |

### ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಸಂಡೂರು

| | |
|---|---|
| ಶೇರು ಬಂಡವಾಳ | ರೂ. 76.58 (ರೂ. ಲಕ್ಷಗಳಲ್ಲಿ) |
| ಠೇವಣಿಗಳು | ರೂ. 3812.84 |
| ಸಾಲ ಮತ್ತು ಮುಂಗಡಗಳು | ರೂ. 1617.49 |
| ಕಾಯ್ದಿಟ್ಟ ನಿಧಿಗಳು | ರೂ. 451.78 |
| ಒಟ್ಟು ವ್ಯವಹಾರ | ರೂ. 5430.78 |
| ದುಡಿಯುವ ಬಂಡವಾಳ | ರೂ. 4341.25 |
| ಒಟ್ಟು ಲಾಭ | ರೂ. 137.00 |
| ನಿವ್ವಳ ಲಾಭ | ರೂ. 93.50 |

### ದಿ ಮರ್ಚಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಚಿತ್ರದುರ್ಗ

| | |
|---|---|
| ಶೇರು ಬಂಡವಾಳ | 1.51 ಕೋಟಿ ರೂ.ಗಳು |
| ಠೇವಣಿಗಳು | 54.07 ಕೋಟಿ ರೂ.ಗಳು |
| ಸಾಲ ಮತ್ತು ಮುಂಗಡಗಳು | 40.92 ಕೋಟಿ ರೂ.ಗಳು |
| ಕಾಯ್ದಿಟ್ಟ ನಿಧಿಗಳು | 19.76 ಕೋಟಿ ರೂ.ಗಳು |
| ಒಟ್ಟು ವ್ಯವಹಾರ | 95.01 ಕೋಟಿ ರೂ.ಗಳು |
| ದುಡಿಯುವ ಬಂಡವಾಳ | 79.88 ಕೋಟಿ ರೂ.ಗಳು |

### ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಪುತ್ತೂರು

| | |
|---|---|
| DEPOSITS | 1089455080 |
| LOANS & ADVANCES | 878410490 |
| SHARE CAPITAL | 21722000 |
| FUNDS | 36418915 |
| TOTAL BUSINESS | 1967865570 |
| TOTAL WORKING CAPITAL | 1167595995 |

# ಸಹಕಾರ ಬ್ಯಾಂಕು / ಸಂಸ್ಥೆಗಳಲ್ಲಿ ಷೇರು ಪ್ರೀಮಿಯಮ್ : ಹೊಸ ಚಿಂತನೆ



▸▸ **ಶ್ರೀ ಮಧುಕರ ಹೆಗಡೆ,** ಚಾರ್ಟರ್ಡ್ ಅಕೌಂಟಂಟ ಬೆಂಗಳೂರು.

110 ವರ್ಷಗಳ ಸುದೀರ್ಘ ಪ್ರಯಣದಲ್ಲಿ ಸಹಕಾರ ಕ್ಷೇತ್ರ ಅನೇಕ ಎಳು ಬೀಳುಗಳನ್ನು ದಾಟಿ ಇತ್ತೀಚಿನ 2 ದಶಕಗಳಲ್ಲಿ ವಿಶೇಷವಾಗಿ ಹೊಸ ಆರ್ಥಿಕ ನೀತಿ ಬಂದನಂತರ ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ಪ್ರವೇಶಿಸುವುದರ ಜೊತೆಗೆ ಆಧುನಿಕ ತಾಂತ್ರಿಕತೆಯನ್ನು ರೂಢಿಸಿಕೊಂಡು ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ಪ್ರಗತಿಯನ್ನು ಕಾಣಲು ಸಾಧ್ಯವಾಗಿದೆ.

ನಿಧಿ ಸಂಗ್ರಹಣೆ ಖಾಸಗಿ ಅಥವಾ ವಾಣಿಜ್ಯ ಬ್ಯಾಂಕುಗಳಲ್ಲಿರುವಂತೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಪರಿಣಾಮಕಾರಿಯಾಗಿ ಆಗುತ್ತಿಲ್ಲವೆಂಬುದು ಬ್ಯಾಂಕಿಂಗ್ ತಜ್ಞರ ಹಾಗೂ ರಿಸರ್ವ್ ಬ್ಯಾಂಕಿನವರ ಅಭಿಪ್ರಾಯ. ವರ್ಷ 2006–07ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ವಾರ್ಷಿಕ ನೀತಿ ನಿರೂಪಣೆ ಸಿದ್ಧಪಡಿಸುವ ಹಂತದಲ್ಲಿ ಈ ಬಗ್ಗೆ ಚರ್ಚೆ ನಡೆದು ರಿಸರ್ವ್ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕ ಶ್ರೀ ಎನ್.ಎಸ್. ವಿಶ್ವನಾಥನ್‌ರವರ ನೇತೃತ್ವದಲ್ಲಿ ಅಧ್ಯಯನ ನಡೆದು ಸಹಕಾರ ಬ್ಯಾಂಕುಗಳಲ್ಲಿ ಖಾಸಗಿ ಕಂಪನಿ ಅಥವಾ ಬ್ಯಾಂಕುಗಳಂತೆ ಷೇರುಗಳನ್ನು ಪ್ರೀಮಿಯಮ್ ಮೇಲೆ ಕೊಡಲು ಸಾಧ್ಯ ಎಂದು ಅಭಿಪ್ರಾಯಕ್ಕೆ ಬಂದು ಹಲವು ಶಿಫಾರಸ್ಸುಗಳನ್ನು ಈ ಸಮಿತಿಯು ಮಾಡಿರುವುದು ಗಮನಾರ್ಹವಾಗಿದೆ.

- ಇದರ ಮುಖ್ಯ ಉದ್ದೇಶ ಸಹಕಾರ ಬ್ಯಾಂಕುಗಳಲ್ಲಿ/ಸಂಸ್ಥೆಗಳಲ್ಲಿ ಪ್ರೀಮಿಯಮ್ ಷೇರು ಸಂಗ್ರಹಣೆಯಿಂದ ಬಂಡವಾಳ ಶೇಖರಣೆಯ ಅವಕಾಶವಾಗುತ್ತದೆ.
- ಸಹಕಾರ ಬ್ಯಾಂಕ್/ಸಹಕಾರ ಸಂಸ್ಥೆಯ ಬ್ರಾಂಡ್ ಇಮೇಜ ಬೆಳೆಯುತ್ತದೆ.
- ಸಹಕಾರಿ ಬ್ಯಾಂಕುಗಳು ಸ್ಥಳೀಯ ಬ್ಯಾಂಕುಗಳಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ ಪ್ರಸಕ್ತ ಮುಕ್ತ ಮಾರುಕಟ್ಟೆಯ ಆಧುನಿಕ ಬ್ಯಾಂಕಿಂಗ್ ಕ್ಷೇತ್ರದ ಸಶಕ್ತ ಬ್ಯಾಂಕುಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.
- ಬ್ಯಾಂಕಿನ/ಸಂಸ್ಥೆಯ ಷೇರಿನ ಬೆಲೆ ಹೆಚ್ಚುತ್ತದೆ.
- ಬ್ಯಾಂಕಿನ/ಸಂಸ್ಥೆಯ ಗುಡ್ ವಿಲ್ ಹೆಚ್ಚುತ್ತದೆ.
- ವಿಶೇಷವಾಗಿ ಪ್ರಾರಂಭಿಕ (ಹಳೆಯ) ಷೇರುದಾರ ಹಿತಾಸಕ್ತಿ ಕಾಪಾಡುವುದಾಗಿದೆ.

ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಥವಾ ಸಹಕಾರ ಸಂಸ್ಥೆಗಳಲ್ಲಿ ಈ ಷೇರು ಪ್ರೀಮಿಯಮ್ ವ್ಯವಸ್ಥೆಯನ್ನು ಪ್ರಾರಂಭಿಸಲು ಅವಕಾಶ ಇದೆ ಇದು ಸಾಧ್ಯವೆಂಬುದು ರಿಸರ್ವ್ ಬ್ಯಾಂಕಿನ ಸಮಿತಿಯ ಶಿಫಾರಸ್ಸು ಎಂದ ಮೇಲೆ ಸಹಕಾರಿಗಳು ಈ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯಕ

### ಷೇರು ಪ್ರೀಮಿಯಮ್ ಅಂದರೇನು?

- ನಿಗಧಿತ ಷೇರು ಬೆಲೆಗಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿ ಷೇರು ಖರೀದಿಸುವುದು.
- ನಿಗಧಿತ ಷೇರು ಬೆಲೆ ಹಾಗೂ ಹೆಚ್ಚಿಗೆ ಪಾವತಿಸುವ ಮೊತ್ತ ಇವೆರಡರ ವ್ಯತ್ಯಾಸವೆ ಷೇರು ಪ್ರೀಮಿಯಮ್

### ಪ್ರೀಮಿಯಮ್ ನಿಗಧಿಮಾಡುವುದು

ಒಂದು ಸಹಕಾರ ಬ್ಯಾಂಕು ತನ್ನ ಷೇರಿನ ಮೇಲೆ ಪ್ರೀಮಿಯಮ್ ಷೇರು ಕೊಡುವುದಾದರೆ ಮಾಡುವುದಾದರೆ ಹಲವು ವಿಷಯಗಳಿಗೆ ಗಮನ ಹರಿಸಬೇಕಾಗುತ್ತದೆ ಮತ್ತು ಈ ಬಗ್ಗೆ ನಿಯಮಗಳನ್ನು ಮಾಡಿಕೊಂಡು ಸಂಬಂದಿಸಿದವರಿಂದ ಅನುಮತಿ ಪಡೆಯುವುದು ಅವಶ್ಯಕ.

ಪ್ರೀಮಿಯಮ್ ನಿಗದಿಮಾಡುವಾಗ ಪ್ರಸಕ್ತ ಬ್ಯಾಂಕಿನ ಆಸ್ತಿಗಳು + ನಿಧಿಗಳು. ಜೊತೆಗೆ ಹಿಂದಿನ ಸಾಲುಗಳ ವ್ಯವಹಾರ. ಪ್ರತಿ ಷೇರಿನ ಮೇಲೆ ಆದಾಯ ಪ್ರಮಾಣ, ಇತ್ಯಾದಿ ಗಮನಿಸಬೇಕು.

### ಲಾಭಗಳು

- ಸಹಕಾರಿ ಬ್ಯಾಂಕಿಗೆ ಬ್ರಾಂಡ ಇಮೇಜ್ ಬರುತ್ತದೆ.
- ಸಹಕಾರ ಬ್ಯಂಕಿನ ಷೇರುಗಳಿಗೆ ಒಳ್ಳೆಯ ಬೆಲೆ ಬರುತ್ತದೆ.
- ವೆಚ್ಚವಾಗದೆ ನಿಧಿ ಸಂಗ್ರಹವಾಗುತ್ತದೆ.
- ಸಿ.ಆರ್.ಆರ್.ಮತ್ತು ಎಸ್.ಎಲ್.ಆರ್. ನಿರ್ವಹಿಸುವ ಅಗತ್ಯವಿಲ್ಲ.
- ಬ್ಯಾಂಕಿನ ಸಿ ಅರ್ ಎ ಆರ್ ಸ್ಥಿತಿ ಹೆಚ್ಚುತ್ತದೆ.
- ಈ ಹಣವನ್ನು ಸಾಲ ನೀಡುವುದಕ್ಕಾಗಿ ಉಪಯೋಗಿಸಬಹುದು

### ಷರತ್ತುಗಳು

ಈ ವ್ಯವಸ್ಥೆಯನ್ನು ಪ್ರಾರಂಭಿಸಲು ಸಹಕಾರ ಬ್ಯಾಂಕುಗಳು ಹಲವು ಷರತ್ತುಗಳಿಗೆ ಹಾಗೂ ನಿಯಮಗಳಿಗೆ ಬದ್ಧವಾಗಿರಬೇಕಾಗುತ್ತದೆ.

- ಪಟ್ಟಣ ಸಹಕಾರ ಬ್ಯಾಂಕು ಕನಿಷ್ಠ 10 ವರ್ಷ ಕಾರ್ಯ ನಿರ್ವಹಿಸಿರಬೇಕು.
- ಕಳೆದ 5 ವರ್ಷಗಳಿಂದ ಸತತವಾಗಿ ಲಾಭದಲ್ಲಿರಬೇಕು.
- ಕಳೆದ 5 ವರ್ಷಗಳಿಂದ ಸದಸ್ಯರಿಗೆ ಕನಿಷ್ಠ ಸರಾಸರಿ 12% ಡಿವಿಡೆಂಡ್ ಪಾವತಿಸಿರಬೇಕು.
- ಗ್ರಾಸ್ ಎನ್.ಪಿ.ಎ 10% ಗಿಂತಲೂ ಕಡಿಮೆಯಿರಬೇಕು.
- ನಿವ್ವಳ ಎನ್.ಪಿ.ಎ. 3% ಗಿಂತಲೂ ಕಡಿಮೆಇರಬೇಕು.
- ಕಳೆದ 5 ವರ್ಷಗಳಿಂದ ಸಿ.ಆರ್.ಎ.ಆರ್. ಎಸ್.ಎಲ್.ಆರ್ ನಿರ್ವಹಣೆಯಲ್ಲಿ ವಿಫಲವಾಗಿರಬಾರದು.
- ಸಿ.ಅರ್.ಎ.ಅರ್ ಕನಿಷ್ಠ 10%
- ರಿಸರ್ವ್ ಬ್ಯಾಂಕಿನವರಿಂದ ಕ್ಯಾಮೆಲ್ ರೇಟಿಂಗ್‌ನಲ್ಲಿ 'ಬಿ' ಗ್ರೇಡ್ ಗಿಂತಲೂ ಹೆಚ್ಚು ಗ್ರೇಡ್ ಪಡೆದಿರಬೇಕು.
- ದುಡಿಯುವ ಬಂಡವಾಳ ವಾಸ್ತವಿಕಕ್ಕಿಂತಲೂ 50 ಕೋಟಿ ಹೆಚ್ಚಿಗೆ ಇರಬೇಕು.
- ಆಡಳಿತ ಮಂಡಳಿಯಲ್ಲಿ 2 ವೃತ್ತಿಪರ ನಿರ್ದೇಶಕರು ಕಡ್ಡಾಯವಾಗಿ ಇರಲೇಬೇಕು.

### ಮಾರ್ಗಸೂಚಿಗಳ ನೀಡುವ ಹಾಗೂ ವ್ಯವಸ್ಥೆಯ ಉಸ್ತುವಾರಿ

ಸಮಗ್ರ ವ್ಯವಸ್ಥೆಯನ್ನು ಉಸ್ತುವಾರಿ ಮಾಡುವ ಹಾಗೂ ಮಾರ್ಗದರ್ಶನ ಮಾಡುವ ವ್ಯವಸ್ಥೆ ಅಗತ್ಯ. ಇದಕ್ಕಾಗಿ ರಾಜ್ಯಮಟ್ಟದ ಸಂಸ್ಥೆ + ನಿಬಂಧಕರ ಪ್ರತಿನಿಧಿಗಳು + ಚಾರ್ಟರ್ಡ್ ಅಕೌಂಟೆಂಟ್‌ರು + ನಿವೃತ್ತ ರಿಸರ್ವ ಬ್ಯಾಂಕ ಅಧಿಕಾರಿಗಳು + ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು + ತಜ್ಞರುಗಳಿಂದ ಇವರುಗಳಿಂದ ಆಯ್ದ ಪ್ರತಿನಿಧಿಗಳು ಈ ವ್ಯವಸ್ಥೆಯನ್ನು ಉಸ್ತುವಾರಿ ಮಾಡುವ ಹಾಗೂ ಅಗತ್ಯ ಮಾರ್ಗದರ್ಶನ ಮಾಡುವ ಕ್ರಮವಿಡಬಹುದು.

ಸಹಕಾರಿ ಕ್ಷೇತ್ರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಹಾಗು ದೊಡ್ಡ ಸಹಕಾರಿ ಸಂಸ್ಥೆಗಳು ಈ ವ್ಯವಸ್ಥೆಯನ್ನು ಪ್ರಾರಂಭಿಸುವ ಕಾಲ ಈಗ ಬಂದಿದೆ. ಸಹಕಾರಿ ಬ್ಯಾಂಕುಗಳು/ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ಮಾನಸಿಕತೆಯಿಂದ ಹೊರಬಂದು ಬದಲಾವಣೆಯ ವೇಗದ ಯುಗಕ್ಕೆ ಹೊಂದಿಕೊಳ್ಳುವ ಸಹಕಾರ ಸಂಸ್ಥೆಗಳನ್ನು ಕಾರ್ಪೋರೇಟ್ ವ್ಯವಸ್ಥೆಗಳನ್ನಾಗಿ ನೋಡುವ ಸಮಯ ಬಂದಿದೆ. ಕಂಪನಿಗಳ ಷೇರು ವ್ಯವಾಟದ ಹಾಗೆ ಒಂದು ಬೆಲೆಗೆ ಖರೀದಿಸಿದ ಷೇರುಗಳನ್ನು ಕೆಲವು ಸಮಯದ ನಂತರ ಹೆಚ್ಚಿನ ಬೆಲೆಗೆ ಮಾರಿ ಲಾಭಗಳಿಸುವ ಷೇರುಗಳನ್ನು ಬೇರೆಯವರಿಗೆ ವರ್ಗಾಯಿಸುವ ಸಹಕಾರಿ ಕ್ಷೇತ್ರದಲ್ಲಿ ಷೇರುಮಾರುಕಟ್ಟೆಯನ್ನು ಪ್ರವೇಶಿಸುವ ಪ್ರಾರಂಭಿಸುವ ಪ್ರಗತಿ ಸಾಧಿಸುವ ಅವಕಾಶ ಬಂದಿದೆ. ಈ ಬಗ್ಗೆ ಸಹಕಾರಿಗಳ ಚಿಂತನೆ ಸಲಹೆ ಹಾಗೂ ಅಭಿಪ್ರಾಯಗಳಿಗೆ ಮುಕ್ತ ಅವಕಾಶವಿದೆ. ■

## ಸಂಪನ್ಮೂಲ ವ್ಯಕ್ತಿಗಳ ಸಭೆ

ಸಂಯುಕ್ತ ಸಹಕಾರಿ ಹಲವಾರು ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ಸಂಯುಕ್ತ ಸಹಕಾರಿಯ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳ ಸಭೆಯನ್ನು ದಿನಾಂಕ : 25.04.2015 ರಂದು ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್ ಇವರ ಅಧ್ಯಕ್ಷತೆಯಲ್ಲಿ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ ರಾಜೀವ್‌ರವರ ಉಪಸ್ಥಿತಿಯಲ್ಲಿ ಕರೆಯಲಾಗಿದೆ. ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ಅಭಿವೃದ್ಧಿಗೆ ತಮ್ಮ ಸಲಹೆ, ಸೂಚನೆ, ಮಾರ್ಗದರ್ಶನ ಹಾಗೂ ಕಾರ್ಯಕ್ರಮಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಕೋರಿದೆ. ಸ್ಥಳ ಮತ್ತು ಸಮಯವನ್ನು ನಂತರದಲ್ಲಿ ತಿಳಿಸಲಾಗುವುದು.

## ಬೆಂಗಳೂರು ವಿಭಾಗೀಯ ಕಛೇರಿ ನೂತನ ಕಟ್ಟಡಕ್ಕೆ ಸ್ಥಳಾಂತರ ಹಾಗೂ ಕಾರ್ಯಾರಂಭ

ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿಯನ್ನು ಈ ಕೆಳಕಂಡ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಹಾಗೂ ಕಾರ್ಯಾರಂಭ ಮಾಡಿದೆ. ಬೆಂಗಳೂರು ವಿಭಾಗೀಯ ಕಛೇರಿ, ನಂ. 141, ಐಕೆಬ್ಲಾಕ್, 1ನೇ ಮೈನ್ 1ನೇ ಕ್ರಾಸ್, ಡಾ॥ ರಾಜ್‌ಕುಮಾರ ರಸ್ತೆ, ರಾಜಾಜಿನಗರ, ಬೆಂಗಳೂರು.

# ಕರ್ನಾಟಕ ರಾಜ್ಯದ ಸಹಕಾರ ನೀತಿ



▸▸ ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ಯೋಜನಾ ಪರಿಕಲ್ಪನೆಯಲ್ಲಿ ಮೂರನೆಯ ಸಾಧನ ಎಂದು ಪರಿಗಣಿಸಲಾಗಿರುವ ಸಹಕಾರ ವಲಯವು ಸಾಮಾಜಿಕ – ಆರ್ಥಿಕ ಅಭಿವೃದ್ಧಿಯ ಕಾರ್ಯ ವಿಧಾನದಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸುತ್ತಿದೆ. ಆರ್ಥಿಕ ಪರಿಕಲ್ಪನೆಯಾಗಿ ಏಕಸ್ವಾಮ್ಯ ಪದ್ಧತಿಯಂತಹ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ, ಮಧ್ಯವರ್ತಿಗಳು ಹಾಗೂ ಅಸಂಘಟಿತ ಕಾರ್ಮಿಕ ವರ್ಗವನ್ನು ತೊಡೆದುಹಾಕಲು ಸಹಕಾರ ತತ್ವಗಳು ಸಾಂಸ್ಥಿಕ ರಚನೆಗಳಿಗೆ ಒತ್ತಾಯಿಸುತ್ತವೆ. ಅಂತಹ ವಲಯಗಳು ಗಮನಾರ್ಹವಾಗಿ ಹೆಚ್ಚು. ಇಂದು ಸಾಲ, ಕೃಷಿ, ಮಾರಾಟ, ಹೈನುಗಾರಿಕೆ, ಗೃಹ ನಿರ್ಮಾಣ, ರೂಪಾಂತರ ಗ್ರಾಹಕ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಪರಿಸ್ಥಿತಿ ಕರ್ನಾಟಕದಲ್ಲಿ 1947ರಲ್ಲಿ ಕೇವಲ ಮೂರು ಸಾವಿರ ಸಹಕಾರ ಸಂಸ್ಥೆಗಳಿದ್ದು, ಜನಸಂಖ್ಯೆಯ ಶೇಕಡ 15ರಷ್ಟು ಜನರಿಗೆ ಮಾತ್ರ ಪ್ರಯೋಜನಕಾರಿಯಾಗಿದ್ದವು. ಅವುಗಳ ಶೇರು ಬಂಡವಾಳ 75.80 ಲಕ್ಷ ರೂ. ಹಾಗೂ ದುಡಿಯುವ ಬಂಡವಾಳ 360 ಲಕ್ಷ ರೂ. ಮಾತ್ರ ಆಗಿತ್ತು.

ಆರು ದಶಕಗಳ ನಂತರ ರಾಜ್ಯದಲ್ಲಿ ಸಹಕಾರ ಸಂಘಗಳ ಸಂಖ್ಯೆ 37468ಕ್ಕೂ ಹೆಚ್ಚು ಸಂಸ್ಥೆಗಳಿದ್ದು, 21811687ಲಕ್ಷ ಸದಸ್ಯತ್ವ ಹೊಂದಿ ಆರ್ಥಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವುದು ಹೆಮ್ಮೆಯ ಸಂಗತಿ. ಈ ಸಂಸ್ಥೆಗಳ ಶೇರು ಬಂಡವಾಳ 3129ಕೋಟಿ ರೂ. ಹಾಗೂ ದುಡಿಯುವ ಬಂಡವಾಳ 58692 ಕೋಟಿ ರೂಪಾಯಿ ಇದ್ದು, ಶೇರು ಬಂಡವಾಳದಲ್ಲಿ ಸರ್ಕಾರದ ಪಾಲು 193 ಕೋಟಿ ರೂ. ಆಗಿದೆ.

ಕರ್ನಾಟಕವು ಎಂದಿನಿಂದಲೂ ಅನೇಕ ಸಹಕಾರಿ ಸಾಧನೆಗಳ ಮುಂಚೂಣಿಯಲ್ಲಿದೆ ಹಾಗೂ ಅನೇಕ ಶ್ರೇಷ್ಠ ಸಹಕಾರಿಗಳನ್ನು ಸೃಷ್ಟಿ ಮಾಡಿದೆ. ಪ್ರಥಮ ಕೃಷಿ ಸಾಲ ಸಹಕಾರ ಸಂಘವನ್ನು 1905ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ ಅವರು ಸ್ಥಾಪಿಸಿದರು. "ಸರ್ಕಾರದ ಕನಿಷ್ಠ ಅಥವಾ ಯಾವುದೇ ಹಸ್ತಕ್ಷೇಪವಿಲ್ಲದೆ ಸಣ್ಣ ಗುಂಪುಗಳು ಹಾಗೂ ಜನಸಮುದಾಯಗಳು ಸ್ವತಂತ್ರವಾಗಿ ಚಟುವಟಿಕೆಗಳನ್ನು ಸಂಘಟಿಸುವಂತೆ ನಾವು ಸಹಕಾರವನ್ನು ಒಂದು ಜನಪ್ರಿಯ ಆಂದೋಲನವನ್ನಾಗಿ ಪುನಃಶ್ಚೇತನಗೊಳಿಸಬಹುದು" ಎಂದು ಈಗಿನ ಸರ್ಕಾರವು ಅನೇಕ ಸಂದರ್ಭಗಳಲ್ಲಿ ಒತ್ತಿ ಹೇಳುತ್ತಾ ಬಂದಿದೆ. ಸರ್ಕಾರ ಈಗಾಗಲೇ ಹೊಸ ಕರ್ನಾಟಕ ಸೌಹಾರ್ದ ಸಹಕಾರಿ ಶಾಸನವನ್ನು ರೂಪಿಸಿದೆ ಹಾಗೂ ಈಗಿನ 1959ರ ಸಹಕಾರ ಸಂಘಗಳ ಶಾಸನಕ್ಕೆ ಸಮಗ್ರ ತಿದ್ದುಪಡಿ ತಂದಿದೆ. ಭಾರತ ಸರ್ಕಾರ ರಚಿಸಿದ ಬ್ರಹ್ಮಪ್ರಕಾಶ್ ಸಮಿತಿಯ ಶಿಫಾರಸ್ಸುಗಳು ಹಾಗೂ ಅವುಗಳನ್ನು ಆಧರಿಸಿದ ಕೇಂದ್ರ ಮಾದರಿ ಶಾಸನಗಳಿಗಿಂತ ರಾಜ್ಯದ ಕ್ರಮಗಳು ಅನೇಕ ವಿಧಗಳಲ್ಲಿ ಹೆಚ್ಚು ಪ್ರಗತಿಪರವಾಗಿವೆ. 1995ರ ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ನಡೆದ ಸಕ್ರಿಯ ಸಹಕಾರಿಗಳ ರಾಜ್ಯಮಟ್ಟದ ಸಮ್ಮೇಳನ ನೀಡಿದ ಒಂದು ಹೊಸ ಚಿಂತನೆ ಹಾಗೂ ಕರ್ನಾಟಕ ರಾಜ್ಯ ಯೋಜನಾ ಮಂಡಳಿ 1996ರ ಸೆಪ್ಟೆಂಬರ್ 23ರಂದು ನಡೆದ ತನ್ನ ಐತಿಹಾಸಿಕ ಸಭೆಯಲ್ಲಿ ಕರ್ನಾಟಕ ಸರ್ಕಾರವು ರಾಜ್ಯಕ್ಕೆ ಒಂದು ಸಹಕಾರ ನೀತಿಯನ್ನು ರೂಪಿಸಬೇಕೆಂದು ಕೈಗೊಂಡ ನಿರ್ಧಾರದ ಫಲಶ್ರುತಿಯೇ ಈ ಕ್ರಮವಾಗಿದೆ. 1998ರ ಏಪ್ರಿಲ್ 18ರಂದು ನಡೆದ ರಾಜ್ಯಮಟ್ಟದ ವಿಚಾರಗೋಷ್ಠಿಯಲ್ಲಿ ಕರ್ನಾಟಕದ ಹಾಗೂ ಹೊರಗಿನ ಪ್ರಮುಖ ಸಹಕಾರಿಗಳು ಮತ್ತು ಹಿರಿಯ ಗಣ್ಯರು ಸಹಕಾರ ನೀತಿಯ ಕರಡನ್ನು ಪರಿಶೀಲಿಸಿ ಅದನ್ನು ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಬೇಗ ಅಂಗೀಕರಿಸಬೇಕು ಎಂದು ಅಭಿಪ್ರಾಯಪಟ್ಟರು.

ನೀತಿ ನಿರೂಪಕರ ಮಟ್ಟದಲ್ಲಿ ಕಂಡುಬಂದ ಬದಲಾದ ಮನೋಭಾವ ಹಾಗೂ ಸಹಕಾರಿಗಳಲ್ಲಿ ಮೂಡಿದ ತೀವ್ರ ಉತ್ಸಾಹ ಸಹಕಾರಿ ವಲಯದಲ್ಲಿ ಹೆಚ್ಚಿನ ಸಾಧನೆ ಮಾಡಲು ಅನುವಾಗುವಂತೆ ವ್ಯಾಪಕ ನೀತಿ ರೂಪಿಸಲು ದಾರಿ ಮಾಡಿಕೊಟ್ಟವು.

## ಮೂಲ ಉದ್ದೇಶಗಳು

**ರಾಜ್ಯದ ಜನರ ಮನಸ್ಸಿನಲ್ಲಿ ಸಹಕಾರ ಭಾವನೆಯನ್ನು ಮೂಡಿಸುವುದು.**

ಪ್ರತಿಯೊಬ್ಬ ವ್ಯಕ್ತಿಯೂ ಜೀವನವನ್ನು ಸಹಕಾರಿ ಪ್ರಯತ್ನ ಎಂದು ಭಾವಿಸಿ ಅದಕ್ಕೆ ತಕ್ಕಂತೆ ಸಾರ್ವತ್ರಿಕ ಜೀವನವನ್ನು ರೂಪಿಸಲು ಇತರರಿಗೆ ಸಹಾಯ ಮಾಡುವಂತೆ ಪ್ರೇರೇಪಿಸುವುದು. ಒಂದು ಯೋಜಿತ ಅರ್ಥ ವ್ಯವಸ್ಥೆಯು ಒಂದು ಸಹಕಾರಿ ಪದ್ಧತಿಯನ್ನು ನೆಚ್ಚಿಕೊಳ್ಳುವುದು ಸಾಧ್ಯವಾಗುವುದಾದರೆ ಅದು ಒಂದು ಜೀವಂತ ದೇಹದ ಸೂಕ್ಷ್ಮ ಗುಣಗಳನ್ನು ಪುನಶ್ಚೇತನಗೊಳಿಸುವುದು. ಆದ್ದರಿಂದಲೇ ರಾಜ್ಯದ ಜನರಲ್ಲಿ ಇನ್ನಷ್ಟು ಸಹಕಾರ ಭಾವನೆಯನ್ನು

**ಪಂಡಿತ್ ಜವಹರ್‌ಲಾಲ್ ನೆಹರೂ ಅವರನ್ನು ಉಲ್ಲೇಖಿಸುವುದಾದರೆ ಅವರು "ಇಡೀ ಸಹಕಾರದ ಪರಿಕಲ್ಪನೆ ಸಾರ್ವಜನಿಕ ಒತ್ತಾಸೆಯನ್ನೇ ಆಧರಿಸಿರಬೇಕು ಹಾಗೂ ಅದು ಮೇಲಿನಿಂದ ಸರ್ಕಾರ ಸಂಘಟಿಸಿದ ಆಂದೋಲನದ ಸ್ವರೂಪ ತಾಳಬಾರದು". ಸರ್ಕಾರ ಸಹಾಯ ಮಾಡಬಹುದು ಹಾಗೂ ಅದು ಸಹಾಯ ಮಾಡಬೇಕು. ಆದರೆ ಎಲ್ಲವೂ ಸಾರ್ವಜನಿಕರ ಅನಿಸಿಕೆ, ಅಪೇಕ್ಷೆಗಳಿಂದ, ಸಾರ್ವಜನಿಕ ಅಭಿಪ್ರಾಯ ಹಾಗೂ ಸಾರ್ವಜನಿಕ ಸಹಕಾರದಿಂದ ತಲೆ ಎತ್ತಬೇಕು. ಸರ್ಕಾರವು ಸಹಕಾರ ಆಂದೋಲನದ ಬೆಳವಣಿಗೆಗೆ ಅನುವು ಹಾಗೂ ಒತ್ತಾಸೆ ಮಾಡಿಕೊಟ್ಟು ತನ್ನ ಭರವಸೆಯನ್ನು ಈಡೇರಿಸಬೇಕು.**

ಮೂಡಿಸುವುದು ಅಗತ್ಯ.

**ಸ್ವಪ್ರೇರಣೆಯಿಂದ ಸಹಕಾರ ಸಂಸ್ಥೆಗೆ ಒತ್ತಾಸೆ ಕೊಡಲು ಜನರಿಗೆ ಉತ್ತೇಜನ ನೀಡುವುದು.**

ಆರಂಭದಲ್ಲಿ ಸರ್ಕಾರವು, ವಿಶೇಷವಾಗಿ ಗ್ರಾಮೀಣ ಸಾಲ ಕ್ಷೇತ್ರದಲ್ಲಿ ಸಹಕಾರ ಸಂಸ್ಥೆಗಳಿಗೆ ಉತ್ತೇಜನ ನೀಡಿತು. ಆದರೆ ಜನರು ತಾವೇ ತಾವಾಗಿ ಸ್ವಪ್ರೇರಣೆಯ ಆಧಾರದ ಮೇಲೆ ಸಹಕಾರ ಸಂಸ್ಥೆಗಳಲ್ಲಿ ಭಾಗಿಯಾಗದಿದ್ದರೆ ಸಹಕಾರ ಸಂಸ್ಥೆಗಳು ಯಶಸ್ವಿಯಾಗುವುದಿಲ್ಲ. ಅದಕ್ಕೆ ವಿರುದ್ಧವಾಗಿ ಸರ್ಕಾರಿ ನೆರವನ್ನೇ ಹೆಚ್ಚಾಗಿ ಅವಲಂಬಿಸಿದರೆ ಅದು ಸಹಕಾರ ತತ್ವಕ್ಕೆ ವಿರುದ್ಧವಾಗುವುದು ಎಂಬ ಅಂಶಗಳು ಮನವರಿಕೆ ಆದವು. ಸ್ವಪ್ರೇರಣೆಯಿಂದ ಸ್ಥಾಪಿತಗೊಂಡ ಸಹಕಾರ ಸಂಸ್ಥೆಯು ಉನ್ನತ ಮಟ್ಟದ ದಕ್ಷತೆಯಿಂದ ಕಾರ್ಯ ಮಾಡಿ ಜನ ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸುವುದು ಸಾಧ್ಯ ಎಂಬುದು ಅನುಭವಕ್ಕೆ ಬಂದಿತು. ಪಂಡಿತ್ ಜವಹರ್‌ಲಾಲ್ ನೆಹರೂ ಅವರನ್ನು ಉಲ್ಲೇಖಿಸುವುದಾದರೆ ಅವರು "ಇಡೀ ಸಹಕಾರದ ಪರಿಕಲ್ಪನೆ ಸಾರ್ವಜನಿಕ ಒತ್ತಾಸೆಯನ್ನೇ ಆಧರಿಸಿರಬೇಕು ಹಾಗೂ ಅದು ಮೇಲಿನಿಂದ ಸರ್ಕಾರ ಸಂಘಟಿಸಿದ ಆಂದೋಲನದ ಸ್ವರೂಪ ತಾಳಬಾರದು". ಸರ್ಕಾರ ಸಹಾಯ ಮಾಡಬಹುದು ಹಾಗೂ ಅದು ಸಹಾಯ ಮಾಡಬೇಕು. ಆದರೆ ಎಲ್ಲವೂ ಸಾರ್ವಜನಿಕರ ಅನಿಸಿಕೆ, ಅಪೇಕ್ಷೆಗಳಿಂದ, ಸಾರ್ವಜನಿಕ ಅಭಿಪ್ರಾಯ ಹಾಗೂ ಸಾರ್ವಜನಿಕ ಸಹಕಾರದಿಂದ ತಲೆ ಎತ್ತಬೇಕು. ಸರ್ಕಾರವು ಸಹಕಾರ ಆಂದೋಲನದ ಬೆಳವಣಿಗೆಗೆ ಅನುವು ಹಾಗೂ ಒತ್ತಾಸೆ ಮಾಡಿಕೊಟ್ಟು ತನ್ನ ಭರವಸೆಯನ್ನು ಈಡೇರಿಸಬೇಕು.

**ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ರೂಪುಗೊಂಡು ಕಾರ್ಯ ಮಾಡುವುದನ್ನು ಖಚಿತಪಡಿಸಬೇಕು.**

ಸಹಕಾರ ಸಂಸ್ಥೆಗಳು ಪರಸ್ಪರ ನೆರವು ಹಾಗೂ ಸಹಾಯದಿಂದ ನಡೆಯುವಂತಹುದು. ಅಂದರೆ ಸಹಜವಾಗಿಯೇ ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತತ್ವಗಳ ಮೇಲೆ ಕಾರ್ಯ ಮಾಡುವುವು ಅಂದ ಹಾಗಾಯಿತು. ಸಹಕಾರ ವಲಯದ ಪಾತ್ರವನ್ನು ಮತ್ತೆ ಸ್ಪಷ್ಟವಾಗಿ ವಿವರಿಸಬೇಕು. ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ರೂಪಿಸಿರುವ ಸ್ವಸಹಾಯ, ಜನತಂತ್ರ, ಸಮತೆ, ನ್ಯಾಯಧರ್ಮ ಹಾಗೂ ಏಕತೆಯಂಥ ನಾನಾ ತತ್ವಗಳನ್ನು ಆಧರಿಸಿ ಕಾರ್ಯ ಮಾಡುವ ಪರಿಣಾಮಕಾರಿ ಕಾರ್ಯ ಸಾಧನೆ ಎಂದು ಅದನ್ನು ಮತ್ತೆ ದೃಢವಾಗಿ ಗುರುತಿಸುವಂತೆ ಆಗಬೇಕು.

ಒತ್ತಾಸೆ ಹಾಗೂ ಉಸ್ತುವಾರಿ ಹೆಸರಿನಲ್ಲಿ ಸರ್ಕಾರ ಯಾವಾಗ ಹಸ್ತಕ್ಷೇಪ ಮಾಡಿತೋ ಆಗಲೇ ಜನತಂತ್ರದ ಹಿಡಿತ ಸಡಿಲಗೊಂಡಿತು. ನಾಮಕರಣ ಸಂಸ್ಕೃತಿ, ಆಗಾಗ ಚುನಾವಣೆಯ ಮುಂದೂಡಿಕೆ ಪರಿಪಾಠವಾಯಿತು. ಇದರಿಂದ ಸಹಕಾರ ಸಂಸ್ಥೆಗಳಿಗೆ ಹೊಸ ನಾಯಕತ್ವ ಸಿಗದಂತಾಯಿತು. ಪಟ್ಟಭದ್ರಹಿತಗಳು ಕತ್ತು ಹಿಸುಕುವಂತಾಯಿತು.

ಇದಕ್ಕೆ ಮಾರುಕಟ್ಟೆ ಸಹಕಾರ ಸಂಸ್ಥೆಗಳು ಉತ್ತಮ ನಿದರ್ಶನ. ಆದರೆ ನಗರ ಸಹಕಾರಿ ಬ್ಯಾಂಕುಗಳ ವಲಯವು ಸರ್ಕಾರದ ಶಾಸನಬದ್ಧ ಹಸ್ತಕ್ಷೇಪದಿಂದ ಮುಕ್ತವಾಗಿದ್ದು, ಆದರ್ಶ ಆರ್ಥಿಕ ಘಟಕಗಳಾಗಿ ತಲೆ ಎತ್ತಿವೆ.

**ರಾಜ್ಯದ ಸಹಕಾರ ಸಂಸ್ಥೆಗಳು ಪರಮಾವಧಿ ಸ್ವಾಯತ್ತಾಧಿಕಾರ ಹೊಂದಿರುವುದನ್ನು ಖಾತರಿಪಡಿಸುವುದು.**

ಸರ್ಕಾರದ ಅನುಚಿತ ಹಸ್ತಕ್ಷೇಪವಿಲ್ಲದೆ ಸಹಕಾರ ಸಂಸ್ಥೆಗಳು ದಕ್ಷತೆಯಿಂದ ಕಾರ್ಯನಿರ್ವಹಿಸಲು ಅವು ತಮ್ಮ ವ್ಯವಹಾರಗಳನ್ನು ಸ್ವತಂತ್ರವಾಗಿ ನಡೆಸಬೇಕು. ಸರ್ಕಾರವು ಮಿತಿಮೀರಿದ ಹಾಗೂ ನಿರ್ಬಂಧಿತ ಶಾಸನಾತ್ಮಕ ಕ್ರಮಗಳನ್ನು ಅನುಸರಿಸಿ ದೈನಂದಿನ ಆಡಳಿತಾತ್ಮಕ ಕಾರ್ಯದಲ್ಲಿ ಕೈಹಾಕಿದ್ದರಿಂದ ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಅಡಚಣೆ ಉಂಟಾಯಿತು. ಸ್ವಾಯತ್ತಾಧಿಕಾರ ಎಂದರೆ ನಿರ್ಧಾರ ಕೈಗೊಳ್ಳುವುದರಲ್ಲಿ ಹಾಗೂ ಆಂತರಿಕ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರುವುದು ಎಂದರ್ಥ.

**ಸಹಕಾರ ಸಂಸ್ಥೆಗಳು ಸದಸ್ಯರಿಗೆ ಉತ್ತರವಾದಿಯಾಗಿರುವುದನ್ನು ಖಚಿತಪಡಿಸುವುದು.**

ಸ್ವಾಯತ್ತಾಧಿಕಾರ ಎಂದರೆ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ

ಸ್ವಾಭಿಮಾನಿ ಸಹಕಾರಿ
Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 20

ಕೊಡುವುದು ಎಂದೇನೂ ಅರ್ಥವಲ್ಲ. ಆಡಳಿತ ಸಮಿತಿಯು ಸರ್ವಸದಸ್ಯರ ಸಭೆಗೆ ಉತ್ತರವಾದಿ ಆಗಿರಬೇಕು ಎಂದು ಮಾತ್ರ ಅರ್ಥ. ಅಧಿಕಾರ ಸ್ಥಾನದಲ್ಲಿರುವ ಸದಸ್ಯರು ಸಂಸ್ಥೆಯ ಹಾಗೂ ಸದಸ್ಯರ ಒಳಿತಿಗಾಗಿ ನಿಷ್ಠ ಹಾಗೂ ಅರ್ಪಣಾಭಾವದಿಂದ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂಬುದೇ ಇಂಥ ಉತ್ತರದಾಯಿತ್ವದ ವೈಶಿಷ್ಟ್ಯ.

**ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಜೀವನದ ಗುಣಮಟ್ಟವನ್ನು ಸತತವಾಗಿ ಸುಧಾರಣೆ ಮಾಡುವ ಸಾಧನಗಳಾಗಿ ಕಾರ್ಯ ಮಾಡುವ ಭರವಸೆ ಕೊಡುವುದು.**

ಸಾರ್ವತ್ರಿಕವಾಗಿ ಸಮಾಜಕ್ಕೆ, ವಿಶೇಷವಾಗಿ ಸಂಸ್ಥೆಯ ಸದಸ್ಯರಿಗೆ ಪ್ರಯೋಜನ ಅಥವಾ ಲಾಭಾಂಶ ಒದಗಿ ಬರುವುದನ್ನು ಖಚಿತಪಡಿಸಲು ಅಗತ್ಯವಾದ ನಿರ್ದಿಷ್ಟ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದಲಾವಣೆ ತರುವ ಗುರಿಯಿಂದ ಸಾಮೂಹಿಕ ಚಟುವಟಿಕೆಗಳನ್ನು ನಡೆಸಲಾಗುವುದು. ವಾಸ್ತವವಾಗಿ ಇದೇ ಸಹಕಾರದ ಸಾರ ಮತ್ತು ಅವಶ್ಯ ಗುಣ, ಜೀವನಮಟ್ಟದ ಸುಧಾರಣೆ ಇದರ ಮೂಲ ಗುರಿ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಸಹಕಾರ ಸಂಸ್ಥೆಗಳನ್ನು ಇದುವರೆಗೂ ಕಾಣುತ್ತಿದ್ದಂತೆ ಸರ್ಕಾರದ ವಿಸ್ತರಿತ ಅಂಗ ಎಂದು ಕಾಣದೆ, ಅವು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ತರುವ ಜೀವನ ಗುಣಮಟ್ಟದಲ್ಲಿ ಸುಧಾರಣೆ ಮಾಡಲು ಶಕ್ತವಾಗಲನುವಾಗುವಂತೆ ಅವುಗಳು ತಮ್ಮ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಅವಕ್ಕೆ ಸ್ವಾತಂತ್ರ್ಯ ನೀಡಬೇಕು.

**ಸರ್ವ ಸಮಾನ ಸಮಾಜ ಸ್ಥಾಪನೆಗೆ ಹಾದಿ ಕಲ್ಪಿಸಲು ದುರ್ಬಲ ವರ್ಗದ ಏಳಿಗೆಗೆ ಹಾಗೂ ದಾರಿದ್ರ್ಯ ನಿರ್ಮೂಲನೆಗೆ ಸಾಧನಗಳಾಗಿ ಸಹಕಾರ ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸುವುದು.**

ಸರ್ವ ಸಮಾನ ಸಮಾಜ ಸ್ಥಾಪನೆ ಮಾಡಲು ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು, ದುರ್ಬಲ ವರ್ಗಗಳ ಏಳಿಗೆಯ ಹಾಗೂ ದಾರಿದ್ರ್ಯ ನಿರ್ಮೂಲನೆಯ ಸಾಮಾಜಿಕ ಸಾಧನಗಳನ್ನಾಗಿ ಸಹಕಾರ ಸಂಸ್ಥೆಗಳನ್ನು ಪರಿಗಣಿಸಬೇಕು. ಈ ವಲಯದ ಅಭಿವೃದ್ಧಿಯ ಗುರಿ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತಗೊಳಿಸುವುದಿಲ್ಲ. ಬಡವ ಹಾಗೂ ಧನಿಕರ ನಡುವಣ ಆರ್ಥಿಕ ಅಸಮಾನತೆಯನ್ನು ನಿವಾರಣೆ ಮಾಡುವುದು ಮತ್ತು ಸಮಾಜದ ಒಂದು ವರ್ಗದ ಕೈಯಲ್ಲಿ ಸಂಪತ್ತು ಕೇಂದ್ರೀಕೃತವಾಗುವುದನ್ನು ತಪ್ಪಿಸುವುದು ಅದರ ಉದ್ದೇಶ.

(ಮುಂದಿನ ಸಂಚಿಕೆಗೆ...)

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop, E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ,** ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**
ವಿನ್ಯಾಸ : **ವರ್ಣ ಕಮ್ಯುನಿಕೇಷನ್ಸ್**
ಮುದ್ರಣ : ಶಕ್ತಿ ಪ್ರಿಂಟೆಕ್, ಬೆಂಗಳೂರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| ಹೆಸರು | ಪದನಾಮ | ದೂರವಾಣಿ |
|---|---|---|
| ಶ್ರೀ ಗುರುನಾಥ ಜ್ಯಾಂತಿಕರ್ | ಅಧ್ಯಕ್ಷರು | 8884466701 |
| ಶ್ರೀ ಹೆಚ್ ವಿ. ರಾಜೀವ್ | ಉಪಾಧ್ಯಕ್ಷರು | 8884466702 |
| ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು | 8884466703 |
| ಶ್ರೀ ನಾರಾಯಣ ಹೆಗಡೆ | ಉಪಪ್ರಧಾನ ವ್ಯವಸ್ಥಾಪಕರು | 8884466704 |
| ಶ್ರೀ ವೈ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | 8884466705 |
| ಶ್ರೀ ಶ್ರೀಕಾಂತ್ ಬರುವೆ | ಸಹ ಪ್ರಧಾನ ವ್ಯವಸ್ಥಾಪಕರು | 8884466706 |
| ಶ್ರೀ ರಘುನಂದನ್ ಕೆ. | ಸಹ ಪ್ರಧಾನ ವ್ಯವಸ್ಥಾಪಕರು | 8884466707 |
| ಶ್ರೀಮತಿ ಕೃತಿ ಜನಾರ್ಧನ್ | ಬೆಂಗಳೂರು ವಿಭಾಗಾಧಿಕಾರಿ | 8884466708 |
| ಶ್ರೀಮತಿ ಶೋಭಾ ಆರ್. | ಸಹ ಪ್ರಧಾನ ವ್ಯವಸ್ಥಾಪಕರು | 8884466709 |
| ಶ್ರೀ ವಿ.ಜೆ. ಕಾರಕೂನ | ತರಬೇತಿ ಅಧಿಕಾರಿ | 8884466710 |
| ಶ್ರೀ ಜಿ.ಎಸ್. ಟೋಪ್ಪಣ್ಣವರ್ | ಬೆಳಗಾವಿ ವಿಭಾಗಾಧಿಕಾರಿ | 8884466711 |
| ಶ್ರೀ ಶಿವಕುಮಾರ ಬಿರಾದಾರ | ಮೈಸೂರು ವಿಭಾಗಾಧಿಕಾರಿ | 8884466712 |
| ಶ್ರೀ ಸಂಜಯ್ ಕೊರಟ್‌ಕರ್ | ಗುಲ್ಬರ್ಗಾ ವಿಭಾಗಾಧಿಕಾರಿ | 8884466714 |

**ಬೆಂಗಳೂರು ವಿಭಾಗೀಯ ಕಛೇರಿ :** ನಂ. 141, ಐಕೆಬ್ಲಾಕ್, 1ನೇ ಮೈನ್ 1ನೇ ಕ್ರಾಸ್, ಡಾ॥ ರಾಜ್‌ಕುಮಾರ ರಸ್ತೆ, ರಾಜಾಜಿನಗರ, ಬೆಂಗಳೂರು.
**ಬೆಳಗಾವಿ ವಿಭಾಗೀಯ ಕಛೇರಿ :** ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010